# ಜನತಾವಾಣಿ

ಸಂಪಾದಕರು : ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ, ಚಿಕ್ಕಮಗಳೂರು, ತುಮಕೂರು, ಗದಗ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ ಭಾನುವಾರ, ಮಾರ್ಚ್ 05, 2023

ಸಂಪುಟ : 49 ಸಂಚಿಕೆ : 292 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com


# ರೈತರ ಸಾಲ ಮನ್ನಾ, 3 ಸಾವಿರ ನಿರುದ್ಯೋಗ ಭತ್ಯೆ

## ಕೇಜ್ರಿವಾಲ್ ಭರವಸೆಗಳೊಂದಿಗೆ ಆಮ್ ಆದ್ಮಿ ಪಾರ್ಟಿಯ ಚುನಾವಣಾ ರಣಕಹಳೆ

ದಾವಣಗೆರೆ, ಮಾ. 4 - ಕರ್ನಾಟಕದಲ್ಲಿ ಆಮ್ ಆದ್ಮಿ ಪಾರ್ಟಿ ಸರ್ಕಾರ ಅಧಿಕಾರಕ್ಕೆ ಬಂದರೆ ರೈತರ ಸಾಲ ಮನ್ನಾ ಮಾಡಲಾಗುವುದು ಹಾಗೂ ಕೃಷಿ ಇಳುವರಿಗೆ ಕನಿಷ್ಠ ಬೆಂಬಲ ಬೆಲೆ ವ್ಯವಸ್ಥೆ ಮಾಡಲಾಗುವುದು ಎಂದು ಆಮ್ ಆದ್ಮಿ ಪಾರ್ಟಿ ನಾಯಕ ಹಾಗೂ ದೆಹಲಿ ಮುಖ್ಯಮಂತ್ರಿ ಅರ ವಿಂದ ಕೇಜ್ರಿವಾಲ್ ಘೋಷಿಸಿದ್ದಾರೆ.

ನಗರದ ಹೈಸ್ಕೂಲ್ ಮೈದಾನ ದಲ್ಲಿ ಆಮ್ ಆದ್ಮಿ ಪಾರ್ಟಿ ವತಿಯಿಂದ ಆಯೋಜಿಸಲಾಗಿದ್ದ ಬೃಹತ್ ಸಮಾವೇಶದಲ್ಲಿ ಅವರು ಈ ಘೋಷಣೆ ಮಾಡುವುದ ರೊಂದಿಗೆ ರಾಜ್ಯದಲ್ಲಿ ವಿಧಾನಸಭಾ ಚುನಾವಣೆಗೆ ರಣಕಹಳೆ ಮೊಳಗಿಸಿದರು.

ಕರ್ನಾಟಕದಲ್ಲಿ ಉತ್ತಮ ಶಿಕ್ಷಣ ಹಾಗೂ ಉದ್ಯೋಗದ ವ್ಯವಸ್ಥೆ ಮಾಡಲಾಗುವುದು. ಉದ್ಯೋಗ ಸಿಗುವವರೆಗೂ ತಿಂಗಳಿಗೆ 3 ಸಾವಿರ ರೂ.ಗಳ ನಿರುದ್ಯೋಗ ಭತ್ಯೆ ನೀಡ ಲಾಗುವುದು ಎಂದು ಕೇಜ್ರಿವಾಲ್ ಘೋಷಿಸಿದರು.

ದೆಹಲಿಯ ಮಾದರಿಯಲ್ಲಿ ಕರ್ನಾಟಕದಲ್ಲೂ ಉಚಿತ ವಿದ್ಯುತ್ ನೀಡಲಾಗುವುದು. ದೆಹಲಿಯಂತೆ ಭವ್ಯವಾದ ಶಾಲೆ ಹಾಗೂ ಆಸ್ಪತ್ರೆಗಳನ್ನು ನಿರ್ಮಿಸಲಾಗುವುದು ಎಂದರು.

ಮಹಾರಾಷ್ಟ್ರದ ನಂತರ ಕರ್ನಾಟಕದಲ್ಲಿ ಅತಿ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ.ರೈತರ ಸಾಲ ಮನ್ನಾ ಮಾಡಿ, ಕನಿಷ್ಠ ಬೆಂಬಲ ಬೆಲೆ ಕೊಡುವ ಜೊತೆಗೆ ರೈತರನ್ನು ಎಲ್ಲ ಸಮಸ್ಯೆಗಳಿಂದ ಮುಕ್ತಗೊಳಿಸಲಾಗುವುದು ಎಂದು ಕೇಜ್ರಿವಾಲ್ ಹೇಳಿದರು.

ಕರ್ನಾಟಕದಲ್ಲಿ ಕಟ್ಟಾ ಪ್ರಾಮಾಣಿಕ ಸರ್ಕಾರ ಬೇಕಿದೆ. ಒಮ್ಮೆ ಆಮ್ ಆದ್ಮಿ ಪಾರ್ಟಿಗೆ ಅವಕಾಶ ಕೊಡಿ. ಕೆಲಸ ಮಾಡಲು ಸಾಧ್ಯವಾಗದಿದ್ದರೆ ಮತ್ತೆಂದೂ ಮತ ಕೇಳುವುದಿಲ್ಲ ಎಂದವರು ತಿಳಿಸಿದರು.

ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಮಾತನಾಡಿ, ಹೊಸ ರಾಷ್ಟ್ರೀಯ ಪಿಂಚಣಿ ಹೆಸರಿನಲ್ಲಿ ಸರ್ಕಾರಿ ನೌಕರರಿಂದ (2ನೇ ಪುಟಕ್ಕೆ)



### ಕೇಜ್ರಿವಾಲ್ ಕಿಡಿನುಡಿ

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರಿಗೆ ಶಾಲೆ ಹಾಗೂ ಆಸ್ಪತ್ರೆಗಳನ್ನು ನಿರ್ಮಿಸುವುದೇ ಗೊತ್ತಿಲ್ಲ. ಗುಜರಾತ್‌ನಲ್ಲಿ 30 ವರ್ಷಗಳಿಂದ ಬಿಜೆಪಿ ಸರ್ಕಾರ ಇದೆ.
ಅಲ್ಲಿ ಒಳ್ಳೆಯ ಶಾಲೆ ಹಾಗೂ ಆಸ್ಪತ್ರೆಗಳನ್ನು ನಿರ್ಮಿಸಲು ಸಾಧ್ಯವಾಗಿಲ್ಲ.

ಪಂಜಾಬ್‌ನಲ್ಲಿ ಆಮ್ ಆದ್ಮಿ ಪಾರ್ಟಿಯ ಸಚಿವ ಹಾಗೂ ಶಾಸಕರೊಬ್ಬರು ತಪ್ಪು ಮಾಡಿದಾಗ ನಮ್ಮ ಸರ್ಕಾರವೇ ಜೈಲಿಗೆ ಕಳಿಸಿದೆ. ನಾವು ಯಾರನ್ನೂ ಬಿಡುವುದಿಲ್ಲ. ನನ್ನ ಮಗನೇ ಭ್ರಷ್ಟಾಚಾರ ಮಾಡಿದರೂ ಕ್ಷಮಿಸುವುದಿಲ್ಲ.

ಕರ್ನಾಟಕದ ಜನತೆ ಒಳ್ಳೆಯವರು, ದೇಶಭಕ್ತರು, ಶ್ರಮಿಕರು. ಆದರೆ, ಇಲ್ಲಿನ ಜನಪ್ರತಿನಿಧಿಗಳು ಭ್ರಷ್ಟರಾಗಿದ್ದಾರೆ. ಇವರಿಂದ ದೇಶ-ವಿದೇಶಗಳಲ್ಲಿ ಕರ್ನಾಟಕಕ್ಕೆ ಕೆಟ್ಟ ಹೆಸರು ಬರುತ್ತಿದೆ.

ಬಿಜೆಪಿಗೆ ಅಧಿಕಾರ ನೀಡಿದರೆ ಭ್ರಷ್ಟಾಚಾರ ನಿವಾರಣೆ ಮಾಡುವುದಾಗಿ ಕಳೆದ ವಾರ ಇಲ್ಲಿಗೆ ಬಂದಿದ್ದ ಬಿಜೆಪಿ ನಾಯಕ ಹಾಗೂ ಕೇಂದ್ರ ಸಚಿವ ಅಮಿತ್ ಷಾ ಅವರು ಹೇಳಿದ್ದಾರೆ. ಆದರೆ, ಕಳೆದ ಐದು ವರ್ಷಗಳಿಂದ ಅವರದೇ ಸರ್ಕಾರ ಇದೆ. ಏನು ಮಾಡುತ್ತಿದ್ದಾರೆ?

ಇತ್ತೀಚೆಗೆ ಈಶಾನ್ಯದ ರಾಜ್ಯಗಳಿಗೆ ನಡೆದ ಚುನಾವಣೆಯಲ್ಲಿ ಆಮ್ ಆದ್ಮಿ ಪಾರ್ಟಿ ಸ್ಪರ್ಧಿಸಿರಲಿಲ್ಲ. ಆದರೂ, ಅಲ್ಲಿನ ಫಲಿತಾಂಶದ ನಂತರ ಮಾತನಾಡುವಾಗ ಪ್ರಧಾನಿ ನರೇಂದ್ರ ಮೋದಿ ಅವರು ಆಮ್ ಆದ್ಮಿ ಪಾರ್ಟಿ ಟೀಕಿಸಿದ್ದಾರೆ. ಇದು ನಮ್ಮ ಬಗ್ಗೆ ಪ್ರಧಾನಿಗೆ ಇರುವ ಹೊಟ್ಟೆ ಉರಿ ತೋರಿಸುತ್ತದೆ.

ದೆಹಲಿಯಲ್ಲಿ ಉಚಿತ ಸೇವೆಗಳನ್ನು ನೀಡಿದರೂ ಹೆಚ್ಚುವರಿ ಬಜೆಟ್ ಮಂಡಿಸಲಾಗಿದೆ. ಇದಕ್ಕೆ ಭ್ರಷ್ಟಾಚಾರ ಇಲ್ಲದಿರುವುದೇ ಕಾರಣ. ಕರ್ನಾಟಕದಲ್ಲಿ ಉಚಿತ ಸೇವೆಗಳು ಇರದೇ ಇದ್ದರೂ, 3 ಲಕ್ಷ ಕೋಟಿ ರೂ.ಗಳ ಸಾಲ ಮಾಡಲಾಗಿದೆ.

### ಎಮ್ಮೆ ಕದ್ದವರು ಯಾರು?

ಹಳ್ಳಿಯೊಂದರಲ್ಲಿ ಎಮ್ಮೆಗಳ ಕಳ್ಳತನವಾಗುತ್ತಿತ್ತು. ಕಳ್ಳರ ಪತ್ತೆ ಮಾಡಲಾಗದೇ ಬೇಸತ್ತ ಗ್ರಾಮಸ್ಥರು, ಸಾಧು ಒಬ್ಬರ ಬಳಿ ಹೋಗಿ ಸಮಸ್ಯೆಗೆ ಪರಿಹಾರ ಕೇಳಿದರು.

ಚಾದರ್ ಒಂದನ್ನು ಕೊಟ್ಟ ಸಾಧು, ಇದನ್ನು ನಾಲ್ಕು ಜನ ಹಿಡಿದುಕೊಳ್ಳಿ. ಗ್ರಾಮಸ್ಥರೆಲ್ಲ ಚಾದರ್ ಕೆಳಗೆ ನಡೆದು ಬರಲಿ. ಕಳ್ಳ ಇದರ ಕೆಳಗೆ ಬಂದರೆ ಸತ್ತು ಹೋಗುತ್ತಾನೆ ಎಂದರು.

ಅದರಂತೆ ನಾಲ್ವರು ಚಾದರ್ ಹಿಡಿದರು. ಉಳಿದ ಗ್ರಾಮಸ್ಥರೆಲ್ಲ ಸರದಿಯಲ್ಲಿ ಚಾದರ್ ಕೆಳಗೆ ಸಾಗಿದರು. ಆದರೆ, ಯಾರೊಬ್ಬರೂ ಸಾಯಲಿಲ್ಲ. ಹತಾಶರಾದ ಗ್ರಾಮಸ್ಥರು ಮತ್ತೆ ಸಾಧು ಬಳಿ ಹೋಗಿ ನಡೆದ ವಿಷಯ ತಿಳಿಸಿದರು. ಆಗ ಸಾಧು, ಕಳ್ಳತನ ಮಾಡಿದವರೇ ಚಾದರ್ ಹಿಡಿದಿದ್ದರು! ಕಳ್ಳರು ಸಾಯಲು ಹೇಗೆ ಸಾಧ್ಯ? ಎಂದರು. ಈ ಕಥೆ ಹೇಳಿದ ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್, ಈ (2ನೇ ಪುಟಕ್ಕೆ)

### ಸಿಸೋಡಿಯಾಗೆ ಸಮರ್ಥನೆ, ಮಾಡಾಳ್‌ಗೆ ಖಂಡನೆ

ದಾವಣಗೆರೆ, ಮಾ. 4 - ಅಬಕಾರಿ ಭ್ರಷ್ಟಾಚಾರ ಪ್ರಕರಣದಲ್ಲಿ ಸಿಲುಕಿ ಬಂಧಿತರಾಗಿರುವ ದೆಹಲಿಯ ಮಾಜಿ ಉಪ ಮುಖ್ಯಮಂತ್ರಿ ಹಾಗೂ ಎ.ಎ.ಪಿ. ನಾಯಕ ಮನೀಶ್ ಸಿಸೋಡಿಯ ಅವರನ್ನು ಪಕ್ಷದ ವೇದಿಕೆಯಲ್ಲಿ ಸಮರ್ಥಿಸಿಕೊಳ್ಳಲಾಯಿತು.

ಸಿಸೋಡಿಯಾ ಉತ್ತಮ ಶಾಲೆಗಳನ್ನು ನಿರ್ಮಿಸಿದ್ದಾರೆ, ಉತ್ತಮ ಶಿಕ್ಷಣ ನೀಡುತ್ತಿದ್ದಾರೆ. ಇದನ್ನು ಸಹಿಸದೇ ಅವರನ್ನು ಜೈಲಿಗೆ ಹಾಕಲಾಗಿದೆ ಎಂದು ವೇದಿಕೆಯಲ್ಲಿ ಮಾತನಾಡಿದ ನಾಯಕರು ಹೇಳಿದರು.

ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಮಾತನಾಡಿ, ಸಿಸೋಡಿಯ ವಿರುದ್ಧ ನೂರಾರು ಕೋಟಿ ರೂ.ಗಳ ಭ್ರಷ್ಟಾಚಾರದ ಆರೋಪ ಮಾಡಲಾಗುತ್ತಿದೆ. ಆದರೆ, ಅವರ ಮನೆ ಮೇಲೆ ದಾಳಿ ಮಾಡಿದಾಗ ಸಿಕ್ಕಿದ್ದು 10 ಸಾವಿರ ರೂ. ಮಾತ್ರ ಎಂದರು. ಆಮ್ ಆದ್ಮಿ ಪಾರ್ಟಿ ರಾಜ್ಯಾಧ್ಯಕ್ಷ ಪೃಥ್ವಿ ರೆಡ್ಡಿ (2ನೇ ಪುಟಕ್ಕೆ)



## ಇವನಾರವ..? ನಮ್ಮವ...ಇವ ನಮ್ಮವ...!

## ವಿನಾಯಕ ಪೈಲ್ವಾನ್ ಪಾಲಿಕೆ ಮೇಯರ್ ಉಪ ಮೇಯರ್ ಆಗಿ ಯಶೋಧ ಹೆಗ್ಗಪ್ಪ

ದಾವಣಗೆರೆ, ಮಾ.4- 'ಇವನಾರವ, ಇವನಾರವ, ಇವನಾರವನೆಂದೆನಿಸದಿರಯ್ಯಾ. ಇವ ನಮ್ಮವ, ಇವ ನಮ್ಮವ, ಇವನಮ್ಮವನೆಂದೆನಿಸಯ್ಯಾ' ಎಂಬ ಬಸವಣ್ಣನವರ ವಚನದಂತೆ ಶನಿವಾರ ಮಹಾನಗರ ಪಾಲಿಕೆ ನೂತನ ಮೇಯರ್ ಆಗಿ ಅವಿರೋಧವಾಗಿ ಆಯ್ಕೆಯಾದ 7ನೇ ವಾರ್ಡ್‌ನ ವಿನಾಯಕ ಬಿ.ಹೆಚ್. ಅವರ ಮೇಲೆ ಕಾಂಗ್ರೆಸ್ ಹಾಗೂ ಬಿಜೆಪಿ ಎರಡೂ ಪಕ್ಷದ ನಾಯಕರು ಪ್ರೀತಿ ತೋರಿಸಿದರು.

ನೂತನ ಮೇಯರ್ ಅವರನ್ನು ತಮ್ಮ ಬಳಿ ಕರೆದೊಯ್ಯಲು ಎರಡೂ ಪಕ್ಷದ ಮುಖಂಡರು ಜಿದ್ದಿಗೆ ಬಿದ್ದವರಂತೆ ಸೆಣಸಾಡಿದರು. ಒಂದು ಹಂತದಲ್ಲಿ ಮಹಾಪೌರರನ್ನು ಎಳೆದಾಡಿ ಕರೆದೊಯ್ದು ಇವರು ನಮ್ಮವರು ಇವರು ನಮ್ಮವರು ಎಂದು ಘೋಷಿಸಿದರು.

ಶನಿವಾರ ಮಧ್ಯಾಹ್ನ ಈ ಪ್ರಸಂಗ ನೆರೆದಿದ್ದವರಿಗೆ ಮನರಂಜನೆ ನೀಡಿತಾದರೂ, ಮೇಯರ್ ಯಾವ ಪಕ್ಷದವರು ಎಂದು ಒಬ್ಬರನ್ನೊಬ್ಬರು ಕೇಳಿ ಕೊಳ್ಳುತ್ತಿದ್ದರು.

ಪಾಲಿಕೆ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಎರಡೂ ಪಕ್ಷದವರೂ ಗದ್ದುಗೆ ನಮ್ಮದೇ ಎಂದು ಕಾಂಗ್ರೆಸ್ ಬೀಗಿತ್ತು.

ಆದರೆ ಕಳೆದ ಎರಡು ಬಾರಿ ಸದಸ್ಯರನ್ನು ಸೆಳೆದು (5ನೇ ಪುಟಕ್ಕೆ)

### ಬಿಜೆಪಿಯದ್ದೇ ಗೆಲುವು

- ಸಂಸದ ಸಿದ್ದೇಶ್ವರ

ವಿನಾಯಕ ಪೈಲ್ವಾನ್ ಅವರನ್ನು ಕರೆತಂದದ್ದು ಬಿಜೆಪಿಯವರು. ಹೀಗಾಗಿ ಗೆಲುವು ಬಿಜೆಪಿಯದ್ದೇ ಎಂದು ಸಂಸದ ಜಿ.ಎಂ. ಸಿದ್ದೇಶ್ವರ ಹೇಳಿದರು. ಸೋಲುವುದು ಗೊತ್ತಾದಾಗ ಕಾಂಗ್ರೆಸ್‌ನವರು ತಮ್ಮ ಅಭ್ಯರ್ಥಿಯ ನಾಮಪತ್ರ ವಾಪಾಸ್ ಪಡೆದಿದ್ದಾರೆ. ಸೋತರೆ ತಮ್ಮ ಮರ್ಯಾದೆ ಹೋಗುತ್ತದೆ ಎಂದು ಅವಿರೋಧ (5ನೇ ಪುಟಕ್ಕೆ)

ಎಸ್ಸಿ ಮೀಸಲಾತಿ ತೆಗೆದುಕೊಂಡು ಬಂದಿದ್ದು ಕಾಂಗ್ರೆಸ್‌ನವರು. ಈಗ ಅದರ ಪ್ರತಿಫಲವನ್ನೂ ಅವರೇ ಉಣ್ಣುತ್ತಿದ್ದಾರೆ.

- ಎಸ್.ಎ. ರವೀಂದ್ರನಾಥ್, ಶಾಸಕ

## ಎನ್.ಹೆಚ್.ಎಂ. ಗುತ್ತಿಗೆ ನೌಕರರ ಸಂಭಾವನೆ ಶೇ.15ರಷ್ಟು ಹೆಚ್ಚಳ

ಬೆಂಗಳೂರು, ಮಾ.4 - ರಾಷ್ಟ್ರೀಯ ಆರೋಗ್ಯ ಅಭಿಯಾನದ ಗುತ್ತಿಗೆ ನೌಕರರ ಸಂಭಾವನೆಯನ್ನು ಶೇ.15 ರಷ್ಟು ಹೆಚ್ಚಿಸಲಾಗಿದೆ.

ಈ ಕುರಿತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಆದೇಶ ಹೊರಡಿಸಿದೆ. ಏಪ್ರಿಲ್ 1 ರಿಂದ ಇದು ಅನ್ವಯವಾಗಲಿದೆ.

ರಾಷ್ಟ್ರೀಯ ಆರೋಗ್ಯ ಅಭಿಯಾನ ದಡಿ ಕೆಲಸ ಮಾಡುವ ಗುತ್ತಿಗೆ ನೌಕರರಿಗೆ ವೇತನ ಹೆಚ್ಚಳ ಮಾಡುವ ಆಗ್ರಹ ಬಂದಿತ್ತು. ಈ ವೇಳೆ, ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್ ಅವರು, ಸರ್ಕಾರದ ಮಟ್ಟದಲ್ಲಿ ಚರ್ಚೆ ನಡೆಸಿ ವೇತನ ಹೆಚ್ಚಳ ಮಾಡಲು ಕ್ರಮ ವಹಿಸುವ ಬಗ್ಗೆ ಆಶ್ವಾಸನೆ ನೀಡಿದ್ದರು.

ಕೆಲಸಕ್ಕೆ ಸೇರ್ಪಡೆಯಾಗುವ ಸಂದರ್ಭದಲ್ಲಿ 20 ಸಾವಿರ ರೂ. ಗಿಂತ ಕಡಿಮೆ ಸಂಭಾವನೆ ಇರುವ ನೌಕರರಿಗೆ ಶೇ.15 ರಷ್ಟು ಹೆಚ್ಚಳವಾಗಲಿದೆ. 5 ವರ್ಷಕ್ಕಿಂತ ಹೆಚ್ಚು ಕಾಲ ನಿರಂತರವಾಗಿ ಕಾರ್ಯನಿರ್ವಹಿಸಿದ (3ನೇ ಪುಟಕ್ಕೆ)

## ಮುಖ್ಯಮಂತ್ರಿಗಳಿಗೆ ಉತ್ತರ ಕೊಡುವ ಕಾಲ ದೂರವಿಲ್ಲ

### ಪಂಚಮಸಾಲಿ ಮೀಸಲಾತಿ ಘೋಷಣೆ ಸುಳ್ಳು ಭರವಸೆ



ಹರಿಹರ, ಮಾ. 4 - ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಪಂಚಮಸಾಲಿ ಸಮಾಜಕ್ಕೆ 2ಡಿ ಮೀಸಲಾತಿ ಘೋಷಣೆ ಮಾಡಲಾಯಿತು ಎಂದು ಸುಳ್ಳು ಭರವಸೆಯನ್ನು ಕೊಟ್ಟಿದ್ದಾರೆ. ಪಂಚಮಸಾಲಿ ಸಮಾಜದವರು ಅವರಿಗೆ ಉತ್ತರ ಕೊಡುವ ಕಾಲ ದೂರವಿಲ್ಲ ಎಂದು ಮಾಜಿ ಶಾಸಕ ಹೆಚ್. ಎಸ್. ಶಿವಶಂಕರ್ ಹೇಳಿದರು.

ಮೀಸಲಾತಿಗಾಗಿ ಪಂಚಮಸಾಲಿ ಗುರುಪೀಠಾಧ್ಯಕ್ಷ ಶ್ರೀ ಜಯಮೃತ್ಯುಂಜಯ ಸ್ವಾಮೀಜಿ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಧರಣಿ ನಡೆಸುತ್ತಿದ್ದಾರೆ. ಸರ್ಕಾರ ಸ್ಪಂದಿಸುತ್ತಿಲ್ಲ ಎಂದು ತಹಶೀಲ್ದಾರ್ ಕಚೇರಿಗೆ ಮನವಿ ಅರ್ಪಿಸಲು ಕರೆ ನೀಡಲಾಗಿತ್ತು. ಈ ಹಿನ್ನೆಲೆಯಲ್ಲಿ ತಹಶೀಲ್ದಾರ್ ಶಶಿಧರಯ್ಯ ಅವರಿಗೆ ಮನವಿ ಸಲ್ಲಿಸಿದ ನಂತರ ಅವರು ಮಾತನಾಡಿದರು.

ಇದಕ್ಕೂ ಮುಂಚೆ ಸಮಾಜದವರು ಪಕ್ಕೀರಸ್ವಾಮಿ ಮಠದಿಂದ ಮೆರವಣಿಗೆ ಮೂಲಕ ತಹಶಿಲ್ದಾರ್ ಕಚೇರಿಗೆ ಬಂದರು

ಈ ಸಂದರ್ಭದಲ್ಲಿ ಪಂಚಮಸಾಲಿ ಸಮಾಜದ ಮುಖಂಡರಾದ ಮಿಟ್ಲಕಟ್ಟಿ ಚಂದ್ರಪ್ಪ, ದೀಟೂರು ಶೇಖರಪ್ಪ, ಕರಿಬಸಪ್ಪ ದೇವರಬೆಳಕೆರೆ, (2ನೇ ಪುಟಕ್ಕೆ)

# ಕನ್ನಡದ ಉಳಿವಿಗೆ ಆದ್ಯತೆ ನೀಡೋಣ

## 12ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಪಾಂಡೋಮಟ್ಟಿ ಶ್ರೀ ಕರೆ



ಚನ್ನಗಿರಿ, ಮಾ.4- ಕನ್ನಡಿಗರು ಸ್ವಾಭಿಮಾನಿಗಳಾಗಬೇಕು. ಕೇವಲ ಘೋಷಣೆಯಿಂದ ಕನ್ನಡ ಭಾಷೆ ಉಳಿಯಲು ಸಾಧ್ಯವಿಲ್ಲ, ಆಚರಣೆಯಿಂದ ಮಾತ್ರ ಸಾಧ್ಯ ಎಂದು ಪಾಂಡೋಮಟ್ಟಿ ವಿರಕ್ತಮಠದ ಡಾ. ಗುರುಬಸವ ಮಹಾಸ್ವಾಮೀಜಿ ಹೇಳಿದರು.

ತಾಲ್ಲೂಕಿನ ಹರನಹಳ್ಳಿ-ಕೆಂಗಾಪುರ ಗ್ರಾಮದ ಶ್ರೀ ರಾಮಲಿಂಗೇಶ್ವರ ಮಠದ ಆವರಣದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಏರ್ಪಡಿಸಿದ್ದ 12ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು.

ನಗರ ಪ್ರದೇಶದಲ್ಲಿ ಬರವಣಿಗೆಯ ಮೂಲಕ ಕನ್ನಡ ಭಾಷೆ ಜೀವಂತವಾಗಿದ್ದರೆ, ಗ್ರಾಮೀಣ ಭಾಗದಲ್ಲಿ ಮಾತನಾಡುವ ಮೂಲಕ ಜೀವಂತವಾಗಿದೆ. ಭಾಷಾ ಸಾಹಿತ್ಯದಲ್ಲಿ ಶ್ರೀಮಂತಿಕೆ ಅಡಗಿದೆ, ಪ್ರಪಂಚದಲ್ಲಿಯೇ ಅತ್ಯಂತ ಶ್ರೀಮಂತಿಕೆ ಹೊಂದಿರುವ ಭಾಷೆ ಕನ್ನಡ. ಕನ್ನಡದಲ್ಲಿ ವ್ಯಾಕರಣ, ಅಲಂಕಾರ, ಸಂಧಿಗಳಿದ್ದು ಅವುಗಳನ್ನು ಅರಿಯುವುದು ಅವಶ್ಯಕವಾಗಿದೆ. ಶಾಲೆಯಿಂದ ಮಾತ್ರ ಭಾಷೆ ಉಳಿಸಲು ಸಾಧ್ಯ. ಆದ್ದರಿಂದ, ಶಾಲಾ ಹಂತದಲ್ಲಿಯೇ ಭಾಷೆ ತಿಳಿಸದಿದ್ದರೆ, ಅದನ್ನು ಕೊಂದಂತೆ ಎಂದರು.

ಭಾಷೆಯ ಅಳಿವು ಹಾಗೂ ಉಳಿವಿಗಾಗಿ ಸರ್ಕಾರದಲ್ಲಿ ಇಚ್ಛಾಶಕ್ತಿಯ ಕೊರತೆ ಇದೆ. ಹಿಂದಿನ ಸಮ್ಮೇಳನದ ನಿರ್ಣಯಗಳ ಜಾರಿಯಿಂದ ಕನ್ನಡ ಭಾಷೆಯನ್ನು ಬಾನೆತ್ತರಕ್ಕೆ ತೆಗೆದುಕೊಂಡು ಹೋಗಲು ಸಾಧ್ಯ. ಪಂಪರಿಂದ ಹಂಪನಾರ ತನಕ ಎಲ್ಲರ ಸಾಹಿತ್ಯದ ಬಗ್ಗೆ ಮಾತನಾಡುತ್ತೇವೆ. ಆದರೆ, ಕನ್ನಡದಲ್ಲಿ ತೇರ್ಗಡೆಯಾಗಲು ಕಷ್ಟ ಪಡುತ್ತಿರುವುದು ಬೇಸರದ ಸಂಗತಿಯಾಗಿದೆ ಎಂದು ಹೇಳಿದರು.

ಒಂದನೇ ತರಗತಿಯನ್ನು ಐದು ಬಾರಿ ಅನುತ್ತೀರ್ಣರಾಗಿ, ಕೇವಲ ಊಟಕ್ಕಾಗಿ ಮತ್ತೋರ್ವರ ಮನೆಯಲ್ಲಿ (2ನೇ ಪುಟಕ್ಕೆ)

### ವಿಜೃಂಭಣೆಯಿಂದ ಜರುಗಿದ ಕನ್ನಡ ಸಾಹಿತ್ಯ ಸಮ್ಮೇಳನ

ಸಮ್ಮೇಳನದ ಸರ್ವಾಧ್ಯಕ್ಷತೆ ವಹಿಸಿರುವ ಯುಗಧರ್ಮ ರಾಮಣ್ಣ ಅವರ ಮೆರವಣಿಗೆ ಅಕ್ಷರಶಃ ಕನ್ನಡಮಯವಾಗಿತ್ತು. ಜಾನಪದ ಕಲಾತಂಡಗಳಾದ ಡೊಳ್ಳುಕುಣಿತ, ಹಗಲುವೇಷ, ನಂದಿಕೋಲು ನೃತ್ಯದ ಮೂಲಕ ಗ್ರಾಮದ ವಿವಿಧ ಭಾಗಗಳಲ್ಲಿ ಬೆಳ್ಳಿ ರಥದಲ್ಲಿ ಅಧ್ಯಕ್ಷರ ಮೆರವಣಿಗೆ ಸಾಗಿ ಬಂದಾಗ ಸರ್ವರೂ ಸ್ವಾಗತ ಕೋರಿದರು. ಕನ್ನಡ ಹಾಗೂ ಭುವನೇಶ್ವರಿ ತಾಯಿಗೆ ಜೈಕಾರ ಕೂಗಿದರು. ಕನ್ನಡ ಬಾವುಟ ಹಾಗೂ ಶಾಲುಗಳು ರಾರಾಜಿಸಿದವು. ಪುಸ್ತಕ ಹಾಗೂ ಖಾದಿ ಬಟ್ಟೆಗಳ ಪ್ರದರ್ಶನ ಮಳಿಗೆಗಳನ್ನು ತೆರೆಯಲಾಗಿತ್ತು.

## 11ಕ್ಕೆ ಹರಿಹರಕ್ಕೆ ಪ್ರಜಾಧ್ವನಿ



ಹರಿಹರ, ಮಾ. 4 - ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ನೇತೃತ್ವದಲ್ಲಿ ಪ್ರಜಾಧ್ವನಿ ಯಾತ್ರೆ ನಗರಕ್ಕೆ ಇದೇ ದಿನಾಂಕ 11 ರಂದು ಆಗಮಿಸಲಿದೆ ಎಂದು ಶಾಸಕ ಎಸ್. ರಾಮಪ್ಪ ಹೇಳಿದರು.

ನಗರದಲ್ಲಿ ಇಂದು ನಡೆದ ಪತ್ರಿಕಾ ಗೋಷ್ಠಿಯಲ್ಲಿ ಅವರು ಮಾತನಾಡಿದರು.

ರಾಜ್ಯದಲ್ಲಿ ಮತ್ತು ಕೇಂದ್ರದಲ್ಲಿ ಆಡಳಿತ ಮಾಡುತ್ತಿರುವ ಬಿಜೆಪಿ ಸರ್ಕಾರ ಬಡವರಿಗೆ, ಶೋಷಿತರಿಗೆ, ದಲಿತರಿಗೆ, ಅಸ್ಪೃಶ್ಯರಿಗೆ ಉಪಯೋಗ ಆಗುವಂತಹ ಕಾರ್ಯವನ್ನು ಮಾಡದೇ ತಮಗೆ ಅನುಕೂಲ ಆಗುವ ರೀತಿಯಲ್ಲಿ ಆಡಳಿತವನ್ನು ಮಾಡುತ್ತಾ ವ್ಯಾಪಕವಾಗಿ ಭ್ರಷ್ಟಾಚಾರ ಮಾಡುತ್ತಿದ್ದಾರೆ ಎಂದು ರಾಮಪ್ಪ ಆರೋಪಿಸಿದರು.

ಈ ಬಗ್ಗೆ ಅರಿವು ಮೂಡಿಸಲಿರುವ ಪ್ರಜಾಧ್ವನಿ ಯಾತ್ರೆ ದಿನಾಂಕ 11 ರಂದು ಮಧ್ಯಾಹ್ನ 3 ಗಂಟೆಗೆ ಬೈಪಾಸ್ ರಸ್ತೆಯ ಮೂಲಕ ಆಗಮಿಸಲಿದೆ. ಬೃಹತ್ ಬೈಕ್ ರ‍್ಯಾಲಿ ಮೂಲಕ (3ನೇ ಪುಟಕ್ಕೆ)

## ಮಾಡಾಳ್ ರಾಜೀನಾಮೆಗೆ ಕಾಂಗ್ರೆಸ್ ಒತ್ತಾಯ : ಸಿಎಂ ನಕಾರ

ಚಿತ್ರದುರ್ಗ, ಮಾ. 4 – ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಅವರ ಪುತ್ರ ಪ್ರಶಾಂತ್ ಲಂಚ ಪ್ರಕರಣದ ಹಿನ್ನೆಲೆಯಲ್ಲಿ ರಾಜೀನಾಮೆ ನೀಡಬೇಕು ಎಂದು ಪ್ರತಿಪಕ್ಷ ಒತ್ತಾಯಿಸುತ್ತಿರುವುದನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಳ್ಳಿ ಹಾಕಿದ್ದಾರೆ.

ರಾಜೀನಾಮೆಗೆ ಆಗ್ರಹಿಸಿರುವ ಸಿದ್ದರಾಮಯ್ಯ ಅವರನ್ನು ತರಾಟೆಗೆ ತೆಗೆದುಕೊಂಡ ಬೊಮ್ಮಾಯಿ, ಸಿದ್ದರಾಮಯ್ಯ ವಿರುದ್ಧ 59 ಭ್ರಷ್ಟಾಚಾರ ಪ್ರಕರಣಗಳಿದ್ದವು. ಲೋಕಾಯುಕ್ತ ಸಂಸ್ಥೆಯನ್ನು ಅವರು ದುರ್ಬಲಗೊಳಿಸಿದ ಕಾರಣಕ್ಕಾಗಿ ಇವುಗಳ ತನಿಖೆ ಸಾಧ್ಯವಾಗಲಿಲ್ಲ ಎಂದರು.

ಪತ್ರಕರ್ತರೊಂದಿಗೆ ಮಾತ ನಾಡಿದ ಅವರು, ತಮ್ಮ ಸರ್ಕಾರ ಲೋಕಾಯುಕ್ತಕ್ಕೆ ಸ್ವಾತಂತ್ರ್ಯ ನೀಡಿದೆ. ಅದು ನಿಷ್ಪಕ್ಷಪಾತ ತನಿಖೆ ನಡೆಸುತ್ತಿದೆ ಎಂದರು. ಪ್ರತಿಪಕ್ಷಗಳಿಗೆ ರಾಜೀನಾಮೆ ಕೇಳುವುದನ್ನು ಬಿಟ್ಟರೆ ಬೇರೆ ಕೆಲಸ ಇಲ್ಲ. ಸಚಿವರೊಬ್ಬರ ಮನೆಯಲ್ಲಿ 2 ಲಕ್ಷ ರೂ. ಸಿಕ್ಕಾಗ ಸಿದ್ದರಾಮಯ್ಯ ರಾಜೀನಾಮೆ ಕೊಟ್ಟಿದ್ದರೇ? ರಾಜ್ಯದಲ್ಲಿ ಬಲಿಷ್ಠ ಲೋಕಾಯುಕ್ತ ಇದ್ದಿದ್ದರೆ ಸಿದ್ದರಾಮಯ್ಯ (2ನೇ ಪುಟಕ್ಕೆ)


# ರಾಜಕೀಯ ಪಕ್ಷಗಳಿಂದ ವಿಶ್ವಕರ್ಮ ಸಮುದಾಯದ ಕಡೆಗಣನೆ

ದಾವಣಗೆರೆ, ಮಾ. 4- ರಾಜ್ಯದಲ್ಲಿ ವಿವಿಧ ರಾಜಕೀಯ ಪಕ್ಷಗಳು ವಿಶ್ವಕರ್ಮ ಸಮುದಾಯವನ್ನು ಕಡೆಗಣಿಸಿದ್ದು, ಸರ್ಕಾರಿ ಸೌಲಭ್ಯಗಳಿಂದ ವಂಚಿತವಾಗಿದೆ. ಮುಂಬರುವ ಚುನಾವಣೆಗಳಲ್ಲಿ ನಮ್ಮ ಸಮುದಾಯದ ಅಭಿವೃದ್ಧಿಗೆ ಶ್ರಮಿಸುವ ಪಕ್ಷವನ್ನು ಬೆಂಬಲಿಸುವುದಾಗಿ ಹಾಸನ ಜಿಲ್ಲೆ ಅರಕಲಗೋಡು ತಾಲ್ಲೂಕು ಅರೆಮಾದನಹಳ್ಳಿ ವಿಶ್ವಬ್ರಾಹ್ಮಣ ಸಂಸ್ಥಾನ ಮಠದ ಶ್ರೀ ವಿಭೂಷಿತ ಶಿವಸುಜ್ಞಾನತೀರ್ಥ ಮಹಾಸ್ವಾಮೀಜಿ ಹೇಳಿದರು.

ನಗರದ ಜಯನಗರ ಶ್ರೀ ಸಾಯಿಬಾಬಾ ಸಭಾ ಭವನದಲ್ಲಿ ಅಖಿಲ ಭಾರತ ವಿಶ್ವಕರ್ಮ ಪರಿಷತ್ (ನವದೆಹಲಿ), ದಾವಣಗೆರೆ ಜಿಲ್ಲಾ ಘಟಕ ಹಾಗೂ ಲಯನ್ಸ್ ರಕ್ತನಿಧಿ ಕೇಂದ್ರದ ಸಹಯೋಗದಲ್ಲಿ ಇಂದು ಹಮ್ಮಿಕೊಂಡಿದ್ದ ಗುರು ವಂದನಾ ಕಾರ್ಯಕ್ರಮ, ನೂತನ ಪದಾಧಿಕಾರಿಗಳ ಪದಗ್ರಹಣ, ವಿಶ್ವಕರ್ಮ ಜನ ಜಾಗೃತಿ ಸಮ್ಮೇಳನ ಹಾಗೂ ರಕ್ತದಾನ ಮತ್ತು ಉಚಿತ ಆರೋಗ್ಯ ತಪಾಸಣಾ ಶಿಬಿರ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದರು.

ವಿಶ್ವಕರ್ಮ ಮಠಗಳಿಗೂ ಸಹ ಸರ್ಕಾರ ಯಾವುದೇ ಅನುದಾನ ಕೂಡ ನೀಡಿರುವುದಿಲ್ಲ. ರಾಜ್ಯದಲ್ಲಿ ಅತಿ ಹೆಚ್ಚು ಮಠಗಳನ್ನು ವೀರಶೈವ ಸಮಾಜ ಹೊಂದಿದ್ದು, ನಂತರದಲ್ಲಿ ಅತಿಹೆಚ್ಚು ಮಠಗಳನ್ನು ಹೊಂದಿರುವ ಎರಡನೆಯ ವಿಶ್ವಕರ್ಮ ಸಮಾಜವಾಗಿದೆ. ಶೈಕ್ಷಣಿಕವಾಗಿ ಯಾವುದೇ ಪ್ರಗತಿಯನ್ನು ಸಾಧಿಸಿಲ್ಲ. ಇದಕ್ಕೆ ಕಾರಣ ಸರ್ಕಾರಗಳು ಗಮನಹರಿಸದಿರುವುದು ಎಂದು ಹೇಳಿದರು. ಸಮುದಾಯದ (3ನೇ ಪುಟಕ್ಕೆ)

### ವಿಶ್ವಬ್ರಾಹ್ಮಣ ಸಂಸ್ಥಾನ ಮಠದ ಶ್ರೀ ವಿಭೂಷಿತ ಶಿವಸುಜ್ಞಾನತೀರ್ಥ ಮಹಾಸ್ವಾಮೀಜಿ ವ್ಯಾಕುಲತೆ



# ಆಧುನಿಕ ತಂತ್ರಜ್ಞಾನದಿಂದ ಮೂಲ ಕಸುಬಿಗೆ ಕೊಡಲಿ

## ಜಗಳೂರು : ಮಡಿವಾಳ ಮಾಚಿದೇವ ಜಯಂತ್ಯೋತ್ಸವದಲ್ಲಿ ಶ್ರೀ ಬಸವ ಮಾಚಿದೇವ ಸ್ವಾಮೀಜಿ



ಜಗಳೂರು, ಮಾ. 4- ಆಧುನಿಕ ತಂತ್ರಜ್ಞಾನದಿಂದ ಮೂಲ ಕಸುಬು ಕ್ರಮೇಣ ನಶಿಸುತ್ತಿದೆ ಎಂದು ಚಿತ್ರದುರ್ಗ ಮಡಿವಾಳ ಮಾಚಿದೇವ ಮಹಾಸಂಸ್ಥಾನ ಮಠದ ಶ್ರೀ ಬಸವ ಮಾಚಿದೇವ ಸ್ವಾಮೀಜಿ ತಿಳಿಸಿದರು.

ಪಟ್ಟಣದ ಹೊರ ವಲಯದ ಬಳಿ ವಿನಾಯಕ ಲೇ ಔಟ್‌ನಲ್ಲಿ ಹಮ್ಮಿಕೊಂಡಿದ್ದ ಮಡಿವಾಳ ಮಾಚಿದೇವ ಜಯಂತ್ಯೋತ್ಸವ ಹಾಗೂ ಸಮುದಾಯ ಭವನ ಶಂಕುಸ್ಥಾಪನೆ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು.

ಮಡಿವಾಳ ಸಮಾಜ ಸ್ವಾಭಿಮಾನಿಗಳಾಗಿ ಸಮಾಜದಲ್ಲಿ ಪ್ರಾಮಾಣಿಕ ಕಾಯಕ ಸೇವೆಗೈಯ್ಯುತ್ತಿದ್ದು, ತಂತ್ರಜ್ಞಾನ ಅಳವಡಿಕೆಗೆ ಮುಂದಾಗಬೇಕು. ಮಕ್ಕಳ ಶಿಕ್ಷಣಕ್ಕೆ ಒತ್ತು ನೀಡಿ ಭವಿಷ್ಯ ರೂಪಿಸಬೇಕು ಎಂದು ಸಲಹೆ ನೀಡಿದರು.

ಜಗಳೂರಿನಲ್ಲಿ ಸುಸಂಸ್ಕೃತ ರಾಜಕಾರಣಿಗಳು ತಳಸಮುದಾಯಗಳ ದಾರ್ಶನಿಕರ ಜಯಂತಿಗಳಲ್ಲಿ ಪಕ್ಷಾತೀತವಾಗಿ ಭಾಗವಹಿಸುವ ಔದಾರ್ಯತೆ ಮೈಗೂಡಿಸಿಕೊಂಡಿದ್ದು, ಸುಸಂಸ್ಕೃತ ರಾಜಕಾರಣಿಗಳ ಸ್ಪಂದನೆಯಿಂದ ನಮಗೆ ಮಡಿವಾಳ ಸಮಾಜದ ಶಾಸಕರಿಲ್ಲ ಎಂಬ ಭಾವನೆಯೇ ಬರುವುದಿಲ್ಲ ಎಂದು ಸ್ವಾಮಿಗಳು ಮೆಚ್ಚುಗೆ ವ್ಯಕ್ತಪಡಿಸಿದರು.

ಶಾಸಕ ಎಸ್.ವಿ. ರಾಮಚಂದ್ರ ಮಾತನಾಡಿ, ಮಡಿವಾಳ ಸಮುದಾಯಕ್ಕೆ ನೀಡಿದ ಭರವಸೆಯಂತೆ ನಿವೇಶನ ಒದಗಿಸಿರುವೆ. ಹೆದ್ದಾರಿ ಪಕ್ಕದಲ್ಲಿನ ಸುಸಜ್ಜಿತ ಸಮುದಾಯ ಭವನ ಜಿಲ್ಲೆಗೆ ಮಾದರಿಯಾಗಲಿದೆ. 50 ಲಕ್ಷ ವೆಚ್ಚದಲ್ಲಿ ಸುಸಜ್ಜಿತ ಸಮುದಾಯ ಭವನ ನಿರ್ಮಾಣಕ್ಕೆ ಶೀಘ್ರ ಭೂಮಿ ಪೂಜೆ ನೆರವೇರಿಸಲಾಗುವುದು ಎಂದು ಭರವಸೆ ನೀಡಿದರು.

ಮಡಿವಾಳ ಮಾಚಿದೇವ ಅಭಿವೃದ್ಧಿ ನಿಗಮದ ಅಧ್ಯಕ್ಷ ರಾಜು ಎಂ. ತಲ್ಲೂರು ಮಾತನಾಡಿ, ರಾಜ್ಯದಲ್ಲಿ ಚಿಕ್ಕ ಸಮುದಾಯವನ್ನು ಗುರುತಿಸಿ ದೇವರಾಜ್ ಅರಸ್ ಅಭಿವೃದ್ಧಿ ನಿಗಮದಿಂದ ಮಡಿವಾಳ ಮಾಚಿದೇವ ಅಭಿವೃದ್ಧಿ ನಿಗಮ ಪ್ರತ್ಯೇಕವಾಗಿದೆ. ಕಳೆದ ಮೂರು ತಿಂಗಳ ಹಿಂದೆ ನಿಗಮ ಮಂಡಳಿ ಅಧ್ಯಕ್ಷರ ಆಯ್ಕೆಯ ನಂತರ ಶೈಕ್ಷಣಿಕ, ನೇರ ಸ್ವಯಂ ಉದ್ಯೋಗ, ಗಂಗಾಕಲ್ಯಾಣ ಯೋಜನೆಗಳಡಿ ಸಾಲ ಸೌಲಭ್ಯಗಳಿಗೆ ಅವಕಾಶವಿದ್ದು, ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ, ಸದುಪಯೋಗಪಡೆದುಕೊಳ್ಳಬೇಕು ಎಂದರು.

ಮಾಜಿ ಶಾಸಕ ಹೆಚ್.ಪಿ. ರಾಜೇಶ್ ಮಾತನಾಡಿ, ಸ್ವಾಭಿಮಾನದಿಂದ ಕಾಯಕ ಮಾಡುತ್ತಿರುವ ಮಡಿವಾಳ ಸಮಾಜ ಮಕ್ಕಳ ಶಿಕ್ಷಣಕ್ಕೆ ಒತ್ತು ನೀಡಿ ಭವಿಷ್ಯ ರೂಪಿಸಬೇಕು. ರಾಜ್ಯದಲ್ಲಿ ಮುಂದಿನ ಚುನಾವಣೆಯಲ್ಲಿ ಮಡಿವಾಳ ಸಮಾಜದಿಂದ ಶಾಸಕರು ಆಯ್ಕೆಯಾಗಿ ಬರಲಿ ಎಂದು ಶುಭ ಹಾರೈಸಿದರು.

ಕಾಂಗ್ರೆಸ್ ಮುಖಂಡ ಚಿಕ್ಕಮ್ಮನಹಟ್ಟಿ ದೇವೇಂದ್ರಪ್ಪ ಮಾತನಾಡಿ,12 ನೇ ಶತಮಾನದಲ್ಲಿನ ಬಸವಣ್ಣನವರ ಅನುಭವ ಮಂಟಪದಲ್ಲಿ ಮಾಚಿದೇವರ ಕಾಯಕ ಯೋಗಿಯಾಗಿ ನಡೆಸಿದ ಸಾಮಾಜಿಕ ಕ್ರಾಂತಿ ಇಂದಿಗೂ ಅವಿಸ್ಮರಣೀಯ. ಮಡಿವಾಳ ಮಾಚಿದೇವರ ಆದರ್ಶಗಳು ಮಾದರಿಯಾಗಲಿ ಎಂದರು.

ಸಮಾರಂಭದಲ್ಲಿ ಕೆಪಿಸಿಸಿ ಎಸ್ಟಿ ಘಟಕದ ಕೆ.ಪಿ. ಪಾಲಯ್ಯ, ಗ್ರಾ.ಪಂ. ಅಧ್ಯಕ್ಷೆ ತಿಮ್ಮಕ್ಕ ರಾಮಪ್ಪ, ಪ.ಪಂ. ಸದಸ್ಯೆ ಮಂಜಮ್ಮ, ಮಡಿವಾಳ ಮಾಚಿದೇವ ಸಂಘದ ತಾಲ್ಲೂಕು ಅಧ್ಯಕ್ಷ ಎಂ.ಸಿ.ರೇವಣಸಿದ್ದಪ್ಪ, ಜಿಲ್ಲೆಯ ವಿವಿಧ ತಾಲ್ಲೂಕುಗಳ ಸಮಾಜದ ಅಧ್ಯಕ್ಷರಾದ ಎಂ.ಎನ್. ಬಸವರಾಜಪ್ಪ, ಮಹಾಂತೇಶ್, ರವಿ ದೊಡ್ಡೇರಿ, ಭೀಮಣ್ಣ, ರಮೇಶ್, ಶಿಕ್ಷಕ ನಾಗರಾಜ್, ಹರೀಶ್ ಮುಂತಾದವರು ಉಪಸ್ಥಿತರಿದ್ದರು.

# ಕನ್ನಡದ ಉಳಿವಿಗೆ ಆದ್ಯತೆ ನೀಡೋಣ

**(1ನೇ ಪುಟದಿಂದ)** ದುಡಿದರು. ಕನ್ನಡವನ್ನು ಸಾಹಿತ್ಯಕ್ಕೆ ಅಪಾರ ಕೊಡುಗೆ ನೀಡಿರುವ ಯುಗಧರ್ಮ ರಾಮಣ್ಣನವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ನಡೆಸುತ್ತಿರುವುದು ಹರ್ಷ ಉಂಟು ಮಾಡಿದೆ ಎಂದರು.

ಕೇಂದ್ರ ಪರಿಹಾರ ಸಮಿತಿ ಅಧ್ಯಕ್ಷ ಎಂ.ಬಸವರಾಜ್ ನಾಯ್ಕ್ ಮಾತನಾಡಿ, ಪ್ರಸ್ತುತ ದಿನ ಮಾನಗಳಲ್ಲಿ ಬೆಳಗಾವಿಯಂತಹ ಜಿಲ್ಲೆಯಲ್ಲಿ ಕನ್ನಡ ಗಟ್ಟಿಯಾಗಿ ಮಾತನಾಡುವ ವಾತಾವರಣ ಇಲ್ಲದಂತಾಗಿದೆ. ಹಿಂಬಾಗಿಲಿನಿಂದ ಕನ್ನಡ ನಾಡು-ನುಡಿ ಕುಗ್ಗಿಸುವ ಪ್ರಯತ್ನ ಮಾಡಲಾಗುತ್ತಿದೆ. ಇಂಗ್ಲಿಷ್ ಶಾಲೆ ವ್ಯಾಮೋಹದಿಂದ ಕನ್ನಡ ಮಾಧ್ಯಮ ಶಾಲೆಗಳು ಅಳಿವಿನಂಚಿಗೆ ತಲುಪುತ್ತಿವೆ ಎಂದರು.

ಮಾಜಿ ಶಾಸಕ ಮಹಿಮಾ ಜೆ.ಪಟೇಲ್ ಮಾತನಾಡಿ, ಭಾಷೆ ಇಲ್ಲದಿದ್ದರೆ ಆಲೋಚನೆ ಸಾಧ್ಯವಿಲ್ಲ. ಹಾಗಾಗಿ, ನಮ್ಮ ಆಲೋಚನೆಯಲ್ಲಿ ಭಾಷೆ ಅಡಗಿದೆ. ಭಾಷೆಯನ್ನು ಪ್ರೀತಿ, ವಿಶ್ವಾಸ, ಸಹಕಾರ, ಸಂತೋಷದಿಂದ ಉಚ್ಚರಿಸಿದರೆ ಮಾತ್ರ ಅದರ ಉಳಿವು ಸಾಧ್ಯ. ದಿನಪತ್ರಿಕೆಗಳು ಸಾಹಿತ್ಯಿಕವಾಗಿ ಮನಸ್ಸನ್ನು ಪ್ರೇರೇಪಿತಗೊಳಿಸುವ ಸುದ್ದಿ ಹಾಗೂ ಪದ ಬಳಕೆಗಳನ್ನು ಮುಖಪುಟದಲ್ಲಿ ಹೆಚ್ಚು ಮುದ್ರಿಸಬೇಕು ಎಂದು ಮನವಿ ಮಾಡಿದರು.

ರಾಷ್ಟ್ರೀಯ ಗೋವು ಸೇವಾ ಸಂಘದ ರಾಜ್ಯಾಧ್ಯಕ್ಷ ಬಿ.ಟಿ.ಸಿದ್ದಪ್ಪ ಮಾತನಾಡಿ, ಜನರಿಗೆ ಸಾಹಿತ್ಯದ ಮೇಲೆ ಆಸಕ್ತಿ ಕಡಿಮೆಯಾಗಿದೆ. ಕನ್ನಡ ಸಾಹಿತ್ಯ ಓದಿದಾಗ ಮಾತ್ರ ಭಾಷೆ ಉಳಿಯಲಿದೆ ಎಂದ ಅವರ, ಸಾಹಿತ್ಯ ಸಮ್ಮೇಳನದ ವೇದಿಕೆಯಲ್ಲಿ ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಮಾಯಕೊಂಡ ವಿಧಾನಸಭಾ ಕ್ಷೇತ್ರಕ್ಕೆ ಸ್ಪರ್ಧೆ ಮಾಡಲು ತಯಾರಿ ನಡೆಸಿದ್ದು, ಟಿಕೆಟ್ ಸಿಕ್ಕರೆ ತಮ್ಮ ಮಗನನ್ನು ಕಣಕ್ಕಿಳಿಸಲು ನಿರ್ಧರಿಸಿರುವುದಾಗಿ ತಿಳಿಸಿ ಮತ ನೀಡುವಂತೆ ಕೋರಿಕೊಂಡರು.

ಪ್ರಾಸ್ತಾವಿಕವಾಗಿ ಮಾತನಾಡಿದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ.ವಾಮದೇವಪ್ಪ, ಕಡಿಮೆ ಅವಧಿಯಲ್ಲಿ 4 ತಾಲ್ಲೂಕು ಸಾಹಿತ್ಯ ಸಮ್ಮೇಳನ ಮತ್ತು 2 ಜಿಲ್ಲಾ ಸಾಹಿತ್ಯ ಸಮ್ಮೇಳನಗಳನ್ನು ಯಶಸ್ವಿಯಾಗಿ ನಡೆಸಲಾಗಿದೆ.

ಪ್ರಸಕ್ತ ವರ್ಷದಲ್ಲಿ ಜಿಲ್ಲೆಯಲ್ಲಿ ಮೂರನೇ ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನ ಆಯೋಜಿಸಲು ಆಯ-ವ್ಯಯದಲ್ಲಿ ಅನುದಾನ ಮೀಸಲಿರಿಸಲಾಗಿದೆ. ಜಿಲ್ಲಾ ಹಂತದ ಘಟಾನುಘಟಿ ನಾಯಕರ ನೆರವು ಪಡೆದು ಸಮ್ಮೇಳನ ಆಯೋಜಿಸಲಾಗುವುದು ಎಂದರು.

ಈ ವೇಳೆ ಹರನಹಳ್ಳಿ-ಕೆಂಗಾಪುರ ಮಠದ ರಾಮಲಿಂಗೇಶ್ವರ ಮಹಾಸ್ವಾಮೀಜಿ ಹಾಗೂ ಸಿರಿಗೆರೆಯ ಯುವ ಪ್ರತಿಭೆ ಕುಮಾರಿ ಶುಭಶ್ರೀ ಮಾತನಾಡಿದರು, ನಿಕಟಪೂರ್ವ ಸಮ್ಮೇಳನ ಅಧ್ಯಕ್ಷರಾದ ಸುಶೀಲಾದೇವಿ ಆರ್.ರಾವ್ ಕನ್ನಡ ಧ್ವಜ ಹಸ್ತಾಂತರಿಸಿದರು.

ಸಮ್ಮೇಳನದಲ್ಲಿ ಕೇಂದ್ರ ಕ.ಸಾ.ಪ ಸಂಘಟನಾ ಕಾರ್ಯದರ್ಶಿ ಜಿ.ರುದ್ರಯ್ಯ, ಶ್ರೀ ರಾಮಲಿಂಗೇಶ್ವರ ವಿದ್ಯಾಸಂಸ್ಥೆಯ ಅಧ್ಯಕ್ಷರಾದ ಹೆಚ್.ಆರ್ ವಿಜಯ ಕುಮಾರ್, ಶರಣ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಕೆ.ವಿ ಪರಮೇಶ್ವರಪ್ಪ, ಚುಟುಕು ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ರಾಜಶೇಖರ ಗುಂಡಗಟ್ಟಿ, ಜಿಲ್ಲಾ ಸರ್ಕಾರಿ ನಿವೃತ್ತ ನೌಕರರ ಸಂಘದ ಅಧ್ಯಕ್ಷ ಎ.ಆರ್ ಉಜ್ಜನಪ್ಪ, ಯುವ ಮುಖಂಡ ಜಿ.ಎಸ್ ಶ್ಯಾಮ್, ವಿದ್ಯಾರ್ಥಿ-ಯುವಜನರು, ಕನ್ನಡಾಭಿಮಾನಿಗಳು ಸೇರಿದಂತೆ ಇತರರು ಭಾಗವಹಿಸಿದ್ದರು. ಚನ್ನಗಿರಿ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಎಲ್.ಜಿ. ಮಧುಕುಮಾರ್ ಸಮ್ಮೇಳನಾಧ್ಯಕ್ಷರ ಪರಿಚಯ ಮಾಡಿಕೊಟ್ಟರು.

**ಸಮ್ಮೇಳನದಲ್ಲಿ ಕೃತಿಗಳ ಲೋಕಾರ್ಪಣೆ :**

ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ ಕನ್ನಡ ಕೃತಿಗಳ ಲೋಕಾರ್ಪಣೆ ಮಾಡುವ ಪರಂಪರೆಗೆ ತಕ್ಕನಾಗಿ ಜಿಲ್ಲಾ 12 ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಎರಡು ಕೃತಿಗಳನ್ನು ಲೋಕಾರ್ಪಣೆ ಮಾಡಲಾಯಿತು.

ಲೇಖಕ ಚಿಗಟೇರಿಯ ಡಾ.ಎ.ಶಿವನಗೌಡ ಕಡುಗೇರಿ ಅವರ ಪರಿಪೂರ್ಣ ನಾರಪ್ಪ ಎಂಬ ನಾಟಕ ಹಾಗೂ ನಿಬ್ಬೆರಗು (ವೈಜ್ಞಾನಿಕ ಲೇಖನಗಳು) ಎಂಬ ಕೃತಿಗಳನ್ನು ಬಿಡುಗಡೆ ಮಾಡಲಾಯಿತು.

# ರೈತರ ಸಾಲ ಮನ್ನಾ, 3 ಸಾವಿರ ನಿರುದ್ಯೋಗ ಭತ್ಯೆ

**(1ನೇ ಪುಟದಿಂದ)** ಹಣ ಪಡೆದು ಷೇರು ಪೇಟೆಯಲ್ಲಿ ತೊಡಗಿಸಲಾಗುತ್ತಿದೆ. ಈ ಹಣ ಅಂಬಾನಿ ಹಾಗೂ ಅದಾನಿಯಂಥವರ ಪಾಲಾಗುತ್ತಿದೆ. ನಿವೃತ್ತಿಯ ವೇಳೆಗೆ ಸರ್ಕಾರಿ ನೌಕರರಿಗೆ ಯಾವುದೇ ಹಣ ಸಿಗದೇ ಇರಬಹುದು ಎಂದು ಕಳವಳ ವ್ಯಕ್ತಪಡಿಸಿದರು. ಇದಕ್ಕಾಗಿಯೇ ಪಂಜಾಬ್ ಸರ್ಕಾರ ಹಳೆ ಪಿಂಚಣಿ ವ್ಯವಸ್ಥೆ ಜಾರಿಗೆ ತರುತ್ತಿದೆ. ನೂತನ ಪಿಂಚಣಿ ವ್ಯವಸ್ಥೆಯಲ್ಲಿ ಹೂಡಿಕೆ ಮಾಡಲಾಗಿರುವ ಪಂಜಾಬ್‌ನ 18 ಸಾವಿರ ಕೋಟಿ ರೂ.ಗಳನ್ನು ವಾಪಸ್ ಪಡೆಯಲು ಹೋರಾಟ ನಡೆಸಲಾಗುವುದು ಎಂದರು.

ಆಮ್ ಆದ್ಮಿ ಪಾರ್ಟಿ ರಾಜ್ಯಾಧ್ಯಕ್ಷ ಪೃಥ್ವಿ ರೆಡ್ಡಿ ಮಾತನಾಡಿ ಕಾಂಗ್ರೆಸ್, ಬಿಜೆಪಿ ಹಾಗೂ ಜೆಡಿಎಸ್‌ಗಳ ಹೆಸರು ಬೇರೆ ಆದರೂ ವರ್ತನೆ ಒಂದೇ. ಇದುವರೆಗೂ ರಾಜ್ಯದಲ್ಲಿ ಆಡಳಿತಾರೂಢ ಪಕ್ಷ ಬದಲಾಗಿದೆಯೇ ಹೊರತು ವ್ಯವಸ್ಥೆ ಬದಲಾಗಿಲ್ಲ. ಈ ಸಮಸ್ಯೆಗಳಿಗೆ ಆಮ್ ಆದ್ಮಿ ಪಾರ್ಟಿಯ 'ಪೊರಕೆ'ಯೇ ಪರಿಹಾರ ಎಂದರು.

ಪಕ್ಷದ ಮುಖಂಡ ಮುಖ್ಯಮಂತ್ರಿ ಚಂದ್ರು ಮಾತನಾಡಿ, ರಾಜ್ಯದಲ್ಲಿ ಕಾಂಗ್ರೆಸ್, ಬಿಜೆಪಿ ಹಾಗೂ ಜೆಡಿಎಸ್‌ಗಳಿಂದ ಆಗಿರುವ ಅನಾಹುತಗಳನ್ನು 'ಪೊರಕೆ'ಯಿಂದ ಸ್ವಚ್ಛಗೊಳಿಸಬೇಕಿದೆ ಎಂದರು.

ಮುಖಂಡರಾದ ಬ್ರಜೇಶ್ ಕಾಳಪ್ಪ ಮಾತನಾಡಿ, ಕರ್ನಾಟಕ ಹಿಂದಿನಿಂದಲೂ ರಾಜಕೀಯ ಪ್ರಯೋಗಕ್ಕೆ ಹೆಸರಾಗಿದೆ. ರಾಜ್ಯದಲ್ಲಿ ದೊಡ್ಡ ಪರಿವರ್ತನೆಯ ಅಗತ್ಯವಿದ್ದು, ಆಮ್ ಆದ್ಮಿ ಪಾರ್ಟಿಗೆ ಅವಕಾಶ ಇದೆ ಎಂದರು.

ಇದೇ ವೇಳೆ ಕಾರ್ಯಕರ್ತರಿಗೆ ಪಕ್ಷದ ಸಿದ್ಧಾಂತವನ್ನು ಪ್ರಾಮಾಣಿಕವಾಗಿ ಪಾಲಿಸುವ ಪ್ರಮಾಣ ವಚನವನ್ನು ಬೋಧಿಸಲಾಯಿತು.

ವೇದಿಕೆಯ ಮೇಲೆ ಆಮ್ ಆದ್ಮಿ ಪಾರ್ಟಿ ಮುಖಂಡರಾದ ಬಿ.ಟಿ. ನಾಗಣ್ಣ, ಶಾಂತಲಾ ದಾಮಲೆ, ಮಾಜಿ ಸಂಸದ ಡಾ. ವೆಂಕಟೇಶ್, ರವಿಚಂದ್ರ ನರವನ, ವಿಜಯ್ ಶರ್ಮ, ಟೆನ್ನಿಸ್ ಕೃಷ್ಣ, ಅಪರ್ಣ ಮತ್ತಿತರರು ಉಪಸ್ಥಿತರಿದ್ದರು.



## ಮಾಡಾಳ್‌ಗೆ ಖಂಡನೆ

**(1ನೇ ಪುಟದಿಂದ)** ಮಾತನಾಡಿ, ಅಂತರರಾಷ್ಟ್ರೀಯ ಮಟ್ಟದ ಶಾಲೆ ಕಟ್ಟುವುದು ಅಪರಾಧವೇ? ಎಂದು ಪ್ರಶ್ನಿಸಿದರು. ಸಿಸೋಡಿಯ ಅವರ ಪರ ಘೋಷಣೆಗೆ ಕರೆ ನೀಡಿದರು. ಅದರಂತೆ, ಆಮ್ ಆದ್ಮಿ ಪಾರ್ಟಿ ಕಾರ್ಯಕರ್ತರು ಘೋಷಣೆ ಹಾಕಿದರು.

ದೆಹಲಿಯಲ್ಲಿ 40 ಲಕ್ಷ ರೂ.ಗಳವರೆಗೆ ಉಚಿತ ಚಿಕಿತ್ಸೆ ದೊರೆಯುವಂತೆ ಮಾಡಿದ ಮಾಜಿ ಸಚಿವ ಸತ್ಯೇಂದ್ರ ಜೈನ್ ಬಂಧಿಸಲಾಗಿದೆ ಎಂದು ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಆಕ್ಷೇಪಿಸಿದರು. ಇದೇ ವೇಳೆ ಮಾತನಾಡಿದ ನಾಯಕರು, ಬಿಜೆಪಿ ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಅವರ ಲಂಚ ಪ್ರಕರಣವನ್ನು ತೀವ್ರವಾಗಿ ಖಂಡಿಸಿದರು.

ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಅವರ ಪುತ್ರ ಪ್ರಶಾಂತ್ ಲಂಚ ಪಡೆಯುವಾಗ ಸಿಕ್ಕಿ ಬಿದ್ದಿದ್ದು, ಅವರ ಮನೆಯಲ್ಲಿ 8 ಕೋಟಿ ರೂ. ಪತ್ತೆಯಾಗಿದೆ.

ಇನ್ನೂ ಶಾಸಕ ವಿರೂಪಾಕ್ಷಪ್ಪ ಬಂಧನವಾಗಿಲ್ಲ. ಮುಂದೆ ಅವರಿಗೆ ಪದ್ಮಭೂಷಣ ಕೊಡಬಹುದು ಎಂದು ಕೇಜ್ರಿವಾಲ್ ಲೇವಡಿ ಮಾಡಿದರು.

## ಡಬ್ಬಲ್ ಇಂಜಿನ್‌ನ ಡಬ್ಬಲ್ ಭ್ರಷ್ಟಾಚಾರ

### ದೇಶಕ್ಕೆ ಹೊಸ ಇಂಜಿನ್ ಸರ್ಕಾರ ಬೇಕು : ಕೇಜ್ರಿವಾಲ್

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಚುನಾವಣಾ ಪ್ರಚಾರಕ್ಕೆ ಬಂದಾಗ ರಾಜ್ಯದಲ್ಲಿ ಶೇ.20ರ ಭ್ರಷ್ಟಾಚಾರ ಇದೆ. ಡಬಲ್ ಇಂಜಿನ್ ಸರ್ಕಾರ ಅಧಿಕಾರಕ್ಕೆ ತನ್ನಿ ಎಂದು ಕರೆ ನೀಡಿದ್ದರು.

ರಾಜ್ಯದ ಜನತೆ ಪ್ರಧಾನಿ ಮಾತು ನಂಬಿ ಬಿಜೆಪಿಗೆ ಮತ ನೀಡಿದರು. ಆದರೆ, ಈಗ ಡಬ್ಬಲ್ ಇಂಜಿನ್ ಸರ್ಕಾರದಲ್ಲಿ ಶೇ.40ರ ಡಬ್ಬಲ್ ಭ್ರಷ್ಟಾಚಾರ ನಡೆಯುತ್ತಿದೆ ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಹೇಳಿದರು.

ಮುಂದೆಯೂ ಬಿಜೆಪಿಗೆ ಮತ ನೀಡಿದರೆ ಶೇ.80ರ ಭ್ರಷ್ಟಾಚಾರ ಆಗಲಿದೆ. ದೇಶಕ್ಕೀಗ ಡಬ್ಬಲ್ ಇಂಜಿನ್ ಸರ್ಕಾರ ಬೇಕಿಲ್ಲ, ಆಮ್ ಆದ್ಮಿ ಪಾರ್ಟಿಯಂತಹ ಹೊಸ ಇಂಜಿನ್ ಸರ್ಕಾರ ಬೇಕು ಎಂದವರು ಹೇಳಿದರು.

ಕರ್ನಾಟಕದ ಗುತ್ತಿಗೆದಾರರ ಸಂಘದಿಂದ ಭ್ರಷ್ಟಾಚಾರ ಆರೋಪ ಮಾಡಲಾಗುತ್ತಿದೆ. ಖಾಸಗಿ ಶಾಲೆಗಳ ಒಕ್ಕೂಟ ಭ್ರಷ್ಟಾಚಾರದ ವಿರುದ್ಧ ದೂರು ನೀಡಿದೆ. ಮಠಗಳಿಂದಲೂ ಕಮೀಷನ್ ಪಡೆಯಲಾಗುತ್ತಿದೆ.

ಬಿಜೆಪಿ ಕಾರ್ಯಕರ್ತ ಸಂತೋಷ್ ಪಾಟೀಲ್



ಭ್ರಷ್ಟಾಚಾರದ ಕಾರಣದಿಂದ ಆತ್ಮಹತ್ಯೆಗೆ ಗುರಿಯಾಗಿದ್ದಾರೆ. ದೇಶದಲ್ಲಿ ಎಲ್ಲೂ ಕಂಡುಬರದೇ ಇರುವ ಪರಿಸ್ಥಿತಿ ಕರ್ನಾಟಕದಲ್ಲಿದೆ ಎಂದವರು ಹೇಳಿದರು. ಶಾಲೆ ಹಾಗೂ ಮಠಗಳನ್ನೂ ಬಿಡದೆ ರಾಜ್ಯ ಸರ್ಕಾರ ಲೂಟಿ ಮಾಡುತ್ತಿದೆ. ಈ ಬಗ್ಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಮೌನವಾಗಿದ್ದಾರೆ. ಭ್ರಷ್ಟಾಚಾರದ ಆರೋಪ ಮಾಡಿದ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಅವರನ್ನೇ ಬಂಧಿಸಲಾಗಿದೆ ಎಂದು ಕೇಜ್ರಿವಾಲ್ ಟೀಕಿಸಿದರು.

## ರಾಮ ಮಂದಿರ ಬೇಕಿಲ್ಲ

ಅಯೋಧ್ಯೆಯಲ್ಲಿ ಸಾವಿರಾರು ಕೋಟಿ ರೂ.ಗಳ ವೆಚ್ಚದಲ್ಲಿ ರಾಮ ಮಂದಿರ ನಿರ್ಮಾಣದ ಅಗತ್ಯ ಇತ್ತೆ? ಮನಸಿನಲ್ಲಿ - ಕೆಲಸದಲ್ಲಿ ರಾಮ ಬೇಕು. ಆಮ್ ಆದ್ಮಿ ಪಾರ್ಟಿಗೆ ರಾಮ ಮಂದಿರ ಬೇಕಿಲ್ಲ, ರಾಮ ರಾಜ್ಯ ಬೇಕು ಎಂದು ಎ.ಎ.ಪಿ. ಮುಖಂಡ 'ಮುಖ್ಯಮಂತ್ರಿ' ಚಂದ್ರು ಹೇಳಿದರು.ಬಿಜೆಪಿಯವರಿಗೆ ರಾಮ ಮಂದಿರ ಬೇಕು, ಆದರೆ ರಾಮ ರಾಜ್ಯ ಬೇಡ. ರಾಮನಿಗೆ ದೇವಾಲಯ ಕಟ್ಟಲಾಗಿದೆ. ಅದೇ ರೀತಿ ದೇಶದ 33 ಕೋಟಿ ದೇವರಿಗೂ ದೇವಾಲಯ ಕಟ್ಟಿಸಿ ಎಂದವರು ಸವಾಲು ಹಾಕಿದರು.

## ಕದ್ದವರು ಯಾರು?

**(1ನೇ ಪುಟದಿಂದ)** ಕಥೆಯ ರೀತಿಯಲ್ಲೇ ಕರ್ನಾಟಕ ಹಾಗೂ ದೇಶದಲ್ಲಿ ಕಳ್ಳತನ ಮಾಡುವವರ ಕೈಗೇ ಅಧಿಕಾರ ಕೊಟ್ಟಿದ್ದೀರಿ. ಅವರು ಹೇಗೆ ಕಳ್ಳರನ್ನು ಹಿಡಿಯಲು ಸಾಧ್ಯ? ಪ್ರಾಮಾಣಿಕವಾದ ಆಮ್ ಆದ್ಮಿ ಪಾರ್ಟಿಗೆ ಅಧಿಕಾರ ಕೊಟ್ಟರೆ ಕಳ್ಳರನ್ನು ಹಿಡಿಯುತ್ತೇವೆ ಎಂದರು.

## ನಗರದಲ್ಲಿ ಇಂದು ಆರೋಗ್ಯ ತಪಾಸಣಾ ಶಿಬಿರ

ಬ್ರಾಹ್ಮಣ ಸಮಾಜ ಸೇವಾ ಸಂಘ, ಶ್ರೀ ಶಂಕರ ಸೇವಾ ಸಂಘ ಹಾಗೂ ಸಿಟಿ ಸೆಂಟ್ರಲ್ ಹಾಸ್ಪಿ ಟಲ್ ಇವರ ಸಂಯುಕ್ತಾಶ್ರಯ ದಲ್ಲಿ ಇಂದು ಬೆಳಿಗ್ಗೆ 9 ರಿಂದ ಮಧ್ಯಾಹ್ನ 2 ರವರೆಗೆ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ನಿಜಲಿಂಗಪ್ಪ ಬಡಾವಣೆಯಲ್ಲಿರುವ ಶ್ರೀ ಶಂಕರ ಸಮುದಾಯ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ. ಶಿಬಿರದಲ್ಲಿ ಆರೋಗ್ಯ ತಪಾಸಣೆ, ರಕ್ತ ಪರೀಕ್ಷೆ, ಹೃದ್ರೋಗ, ಕೀಲು-ಮೂಳೆ ಪರೀಕ್ಷೆ, ದಂತ ತಪಾಸಣೆ, ನೇತ್ರ ಪರೀಕ್ಷೆ, ಪ್ರಸೂತಿ ಮತ್ತು ಸ್ತ್ರೀ ರೋಗ ಪರೀಕ್ಷೆ, ಶಿಶು ಮತ್ತು ಮಕ್ಕಳ ತಪಾಸಣೆ, ಮೂತ್ರ ರೋಗ ಪರೀಕ್ಷೆ ಮಾಡಿ ತಜ್ಞರಿಂದ ಸೂಕ್ತ ಚಿಕಿತ್ಸೆ ಮತ್ತು ಸಲಹೆ ನೀಡಲಾಗುವುದು.

ಶಿಬಿರದಲ್ಲಿ ತಜ್ಞರುಗಳಾದ ಡಾ. ಹೆಚ್.ಎಲ್. ಸುಬ್ಬರಾವ್, ಡಾ. ರವೀಂದ್ರ, ಡಾ. ಅನಿಲ್ ನೆಲವಿಗಿ, ಡಾ. ವೆಂಕಟೇಶ್, ಡಾ. ಹೆಚ್.ಬಿ. ಶಿವಕುಮಾರ್, ಡಾ. ಮುರಳಿ, ಡಾ. ಪಿ.ಎಸ್. ಸುರೇಶ್ ಬಾಬು, ಡಾ. ನಿತೀಶ್ ಕೊಟ್ರಪ್ಪ, ಡಾ. ಶ್ರೀಹರ್ಷ ಕುಲಕರ್ಣಿ, ಡಾ. ಎಂ.ಸಿ. ಶಶಿಕಾಂತ್, ಡಾ. ರೂಪಶ್ರೀ ಶಶಿಕಾಂತ್, ಡಾ. ವೆಂಕಟ್‌ರಾಮ್ ಕಟ್ಟಿ, ಡಾ. ರಶ್ಮಿ ಹೆಗಡೆ ಪಾಲ್ಗೊಂಡು ರೋಗಿಗಳಿಗೆ ಸೂಕ್ತ ಚಿಕಿತ್ಸೆ ನೀಡಲಿದ್ದಾರೆ ಎಂದು ಬ್ರಾಹ್ಮಣ ಸಂಘದ ಅಧ್ಯಕ್ಷ ಡಾ. ಎಂ. ಸಿ. ಶಶಿಕಾಂತ್ ತಿಳಿಸಿದ್ದಾರೆ.

## ಕುಂಬಳೂರು : ಇಂದು ಕಂಕಣಧಾರಣೆ

ಮಲೇಬೆನ್ನೂರು ಸಮೀಪದ ಕುಂಬಳೂರಿನ ಶ್ರೀ ಹನುಮಂತ ದೇವರ ರಥೋತ್ಸವವು ಇದೇ ದಿನಾಂಕ 9ರ ಗುರುವಾರ ಜರುಗಲಿದೆ. ಇಂದು ರಾತ್ರಿ 10.30ಕ್ಕೆ ಕಂಕಣಧಾರಣೆ ಮಾಡಲಾಗು ವುದು. ನಾಳೆ ಸೋಮವಾರ ರಾತ್ರಿ 9.30ಕ್ಕೆ ಗಿಣಿ ಉತ್ಸವ, ಮಂಗಳವಾರ ರಾತ್ರಿ 9.30ಕ್ಕೆ ಚಿಗರಿ ಉತ್ಸವ ನಡೆಯಲಿದೆ.

## ರಾಣೇಬೆನ್ನೂರು : ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ - ಮನವಿ



ರಾಣೇಬೆನ್ನೂರು, ಮಾ. 4 - ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ಕೊಡುವಂತೆ ಸರ್ಕಾರಕ್ಕೆ ಒತ್ತಾಯಿಸಿ ಹೆದ್ದಾರಿ ತಡೆ ನಡೆಸಿ ತಹಶೀಲ್ದಾರರಿಗೆ ಇಂದು ಮನವಿ ಸಲ್ಲಿಸಲಾಯಿತು. ಎ.ಬಿ. ಪಾಟೀಲ, ರಾಜಣ್ಣ ಮೋಟಗಿ, ಸಿದ್ದು ಚಿಕ್ಕಬಿದರಿ, ಪ್ರಭಾವತಿ ತಿಳವಳ್ಳಿ, ಶಿವಪ್ಪ ಗುರಿಕಾರ, ಶಿವಪ್ಪ ಕುರುವತ್ತಿ, ಅಮೋಘ ಬಾದಾಮಿ ಮತ್ತಿತರರಿದ್ದರು.

## ನಗರದಲ್ಲಿ ಇಂದು ಸರ್ಕಾರದ ಯೋಜನೆಗಳ ಫಲಾನುಭವಿಗಳ ಸಮ್ಮೇಳನ

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ವಿವಿಧ ಇಲಾಖೆಗಳ ಆಶ್ರಯದಲ್ಲಿ ಇಂದು ಬೆಳಿಗ್ಗೆ 11.30ಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ಯೋಜನೆಗಳ ಫಲಾನುಭವಿಗಳ ಸಮ್ಮೇಳನವು ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಯಲಿದೆ.

ಕೇಂದ್ರ ಸಂಸದೀಯ ವ್ಯವಹಾರ ಗಣಿ - ಕಲ್ಲಿದ್ದಲು ಖಾತೆ ಸಚಿವ ಪ್ರಹ್ಲಾದ್ ಜೋಶಿ ಸಮ್ಮೇಳನ ಉದ್ಘಾಟಿಸಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ.ಬಸವರಾಜ ಕಾಮಗಾರಿಗಳ ಉದ್ಘಾಟನೆ ನೆರವೇರಿಸುವರು. ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಖಾತೆ ಸಚಿವ ಆಚಾರ್ ಹಾಲಪ್ಪ ಬಸಪ್ಪ ಮಾಹಿತಿ ಕಣಜ ಉದ್ಘಾಟಿಸುವರು. ಸಹಕಾರ ಸಚಿವ ಎಸ್.ಟಿ ಸೋಮಶೇಖರ್ ಸಂಜೀವಿನಿ ಒಕ್ಕೂಟಗಳ ಮಳಿಗೆಗಳನ್ನು ಉದ್ಘಾಟಿಸುವರು. ಸಂಸದ ಜಿ. ಎಂ.ಸಿದ್ದೇಶ್ವರ ಫಲಾನುಭವಿಗಳಿಗೆ ವಾಹನ ವಿತರಣೆ ಮಾಡುವರು.

ಶಾಸಕ ಎಸ್.ಎ ರವೀಂದ್ರನಾಥ್ ಅಧ್ಯಕ್ಷತೆ ವಹಿಸುವರು. ಶಾಸಕರಾದ ಎಂ.ಪಿ.ರೇಣುಕಾಚಾರ್ಯ, ಎಸ್.ವಿ.ರಾಮಚಂದ್ರ, ಪ್ರೊ.ಎನ್.ಲಿಂಗಣ್ಣ, ಶಾಮನೂರು ಶಿವಶಂಕರಪ್ಪ, ಎಸ್.ರಾಮಪ್ಪ, ಮೋಹನ್ ಕುಮಾರ್ ಕೊಂಡಜ್ಜಿ, ಅಬ್ದುಲ್ ಜಬ್ಬಾರ್, ಕೇಂದ್ರ ಪರಿಹಾರ ಸಮಿತಿ ಅಧ್ಯಕ್ಷ ಬಸವರಾಜ್ ನಾಯ್ಕ, ಮಹಾಪೌರ ವಿನಾಯಕ್ ಟಿ.ಹೆಚ್, ದೂಡಾ ಅಧ್ಯಕ್ಷ ಎ.ವೈ.ಪ್ರಕಾಶ್ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

## ಉತ್ತರ ಕೊಡುವ ಕಾಲ ದೂರವಿಲ್ಲ

**(1ನೇ ಪುಟದಿಂದ)** ತಾಪಂ ಮಾಜಿ ಸದಸ್ಯ ಸಿರಿಗೆರೆ ಕೊಟ್ರೇಶಪ್ಪ, ನಗರಸಭೆ ಸದಸ್ಯ ಗುತ್ತೂರು ಜಂಬಣ್ಣ, ಪರಮೇಶ್ವರ ಗೌಡ್ರು, ಪರಮೇಶ್ವರಪ್ಪ ಕುಣೆಬೆಳಕೆರೆ, ನಿಜಲಿಂಗಪ್ಪ, ನವೀನ್ ಭಾನುವಳ್ಳಿ, ಮಹೇಶ್ ಬನ್ನಿಕೋಡು, ಲತಾ ಕೊಟ್ರೇಶ್, ಹುಗ್ಗಿ ಅಡಿವೇಶ್, ಅಂಗಡಿ ಮಂಜುನಾಥ್, ಕಲ್ಲಯ್ಯ, ಬಸಟೆಪ್ಪ ಬೇವಿನಹಳ್ಳಿ ಮತ್ತಿತರರು ಹಾಜರಿದ್ದರು.

## ರಷ್ಯಾದ ಕೊರೊನಾ ಲಸಿಕೆಗೆ ನೆರವಾಗಿದ್ದ ವಿಜ್ಞಾನಿ ಹತ್ಯೆ

ಮಾಸ್ಕೋ, ಮಾ. 4 – ರಷ್ಯಾದ ಕೊರೊನಾ ಲಸಿಕೆಯಾದ ಸ್ಪುಟ್ನಿಕ್ ವಿ ಕಂಡು ಹಿಡಿಯಲು ನೆರವಾಗಿದ್ದ ವಿಜ್ಞಾನಿ ಆಂಡ್ರೆ ಬೊಟಿಕೊವ್ ಅವರನ್ನು ಬೆಲ್ಟ್‌ನಿಂದ ಕತ್ತು ಹಿಸುಕಿ ಹತ್ಯೆ ಮಾಡಲಾಗಿದೆ.

ಗಮಾಲಯ ಸಂಶೋಧನಾ ಕೇಂದ್ರದಲ್ಲಿ ಹಿರಿಯ ಸಂಶೋಧಕರಾಗಿ ಕಾರ್ಯನಿರ್ವಹಿಸಿದ್ದ 47 ವರ್ಷ ಬೊಟಿಕೊವ್, ತಮ್ಮ ಅಪಾರ್ಟ್‌ಮೆಂಟ್‌ನಲ್ಲಿ ಮೃತ ಸ್ಥಿತಿಯಲ್ಲಿ ಕಂಡು ಬಂದಿದ್ದಾರೆ.

## ಕೆ.ಪಿ. ಶಿವಾನಂದಪ್ಪ ನಿಧನ



ಚಿತ್ರದುರ್ಗ ತಾಲ್ಲೂಕು ಕಾಕಬಾಳು ಗ್ರಾಮದ ನಿವಾಸಿ

**ಕೆ.ಪಿ. ಶಿವಾನಂದಪ್ಪ**

ಇವರು ದಿನಾಂಕ 4.03.2023ರ ಶನಿವಾರ ಬೆಳಿಗ್ಗೆ 11 ಕ್ಕೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 78 ವರ್ಷ ವಯಸ್ಸಾಗಿತ್ತು. ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು, ಹಾಗು ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 05.03.2023ರ ಭಾನುವಾರ ಬೆಳಿಗ್ಗೆ 11 ಗಂಟೆಗೆ ಸ್ವಗ್ರಾಮ ಚಿತ್ರದುರ್ಗ ತಾಲ್ಲೂಕು ಕಾಕಬಾಳು ಗ್ರಾಮದ ಜಮೀನಿನಲ್ಲಿ ನೆರವೇರಿಸಲಾಗುವುದು.

**ದು:ಖತಪ್ತ ಕುಟುಂಬ ವರ್ಗ : ಕೆ.ಎಸ್. ಅರವಿಂದ ಬಾಬು**
**ಅರವಿಂದ್ ಅಂಡ್ ಕೊ, ಎಪಿಎಂಸಿ ಯಾರ್ಡ್, ದಾವಣಗೆರೆ.**
**ಮೊ : 98444 12435**

## ಶ್ರೀಮತಿ ರತ್ನಮ್ಮ ನಿಧನ



ದಾವಣಗೆರೆ ವಿನೋಬನಗರ, 1ನೇ ಮೇನ್, 8ನೇ ಕ್ರಾಸ್ ನಿವಾಸಿ ದಿ. ಗುಡಾಳ್ ಹಾಲಪ್ಪನವರ ಧರ್ಮಪತ್ನಿ

**ಶ್ರೀಮತಿ ರತ್ನಮ್ಮ**

ಇವರು ದಿನಾಂಕ 4.03.2023ರ ಶನಿವಾರ ಸಂಜೆ 7.25ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 78 ವರ್ಷ ವಯಸ್ಸಾಗಿತ್ತು. ನಾಲ್ವರು ಪುತ್ರರು, ಇಬ್ಬರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳೂ ಹಾಗು ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 05.03.2023ರ ಭಾನುವಾರ ಮಧ್ಯಾಹ್ನ 12.30ಕ್ಕೆ ನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ದು:ಖತಪ್ತ ಕುಟುಂಬ ವರ್ಗ :**
**ಮೊ : 98445 14484, 97427 14424**

## ಕೆ.ಎಂ. ಅಪರ್ಣ ನಿಧನ



ದಾವಣಗೆರೆ ಆಂಜನೇಯ ಬಡಾವಣೆ 15ನೇ ಕ್ರಾಸ್ ವಾಸಿ ದಿ. ಕೆ.ಎಂ. ಜಗದೀಶ್ವರಯ್ಯ ಇವರ ಧರ್ಮಪತ್ನಿ ಹಾಗು ಶ್ರೀ ಮಾತಾ ಸ್ಟೋರ್ಸ್‌ಮಾಲೀಕರಾದ ರುದ್ರೇಶ್ (ರಾಜು) ಇವರ ತಾಯಿಯವರಾದ

**ಕೆ.ಎಂ. ಅಪರ್ಣ**

ಇವರು ದಿನಾಂಕ 4.03.2023ರ ಶನಿವಾರ ಬೆಳಿಗ್ಗೆ 10.15 ಕ್ಕೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 80 ವರ್ಷ ವಯಸ್ಸಾಗಿತ್ತು. ಇಬ್ಬರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗು ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 04.03.2023ರ ಶನಿವಾರ ಸಂಜೆ 5 ಗಂಟೆಗೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಯಿತು.

**ದು:ಖತಪ್ತ ಕುಟುಂಬ ವರ್ಗ : ಮೊ : 99457 59369**

## ಜಿಗಳಿಮಠದ ಸರ್ವಮಂಗಳಮ್ಮ ನಿಧನ



ಜಿಗಳಿಮಠದ ಗದಿಗಯ್ಯನವರ ಧರ್ಮಪತ್ನಿ ಶ್ರೀಮತಿ ಸರ್ವಮಂಗಳಮ್ಮ (80) ಅವರು ದಿನಾಂಕ 04-03-2023ರ ಶನಿವಾರ ಸಂಜೆ 4.45ಕ್ಕೆ ನಿಧನರಾದರು. ಇಬ್ಬರು ಪುತ್ರರು, ಓರ್ವ ಪುತ್ರಿ, ಮೊಮ್ಮಕ್ಕಳು ಹಾಗೂ ಅಪಾರ ಬಂಧು - ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 05-03-2023ರ ಭಾನುವಾರ ಮಧ್ಯಾಹ್ನ 12 ಕ್ಕೆ ಕತ್ತಲಗೆರೆಯ ಹಾಳೂರಿನ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

## ಸಿಎಂ ನಕಾರ

**(1ನೇ ಪುಟದಿಂದ)** ಬಂಧನವಾಗಿರುತ್ತಿತ್ತು ಎಂದರು. ಇಂತಹ ಪ್ರಕರಣಗಳನ್ನು ದುರ್ಬಲಗೊಳಿಸಲು ಸಿದ್ದರಾಮಯ್ಯ ಲೋಕಾಯುಕ್ತ ಸಂಸ್ಥೆಗಳನ್ನು ದುರ್ಬಲಗೊಳಿಸಿದ್ದರು ಎಂದೂ ಬೊಮ್ಮಾಯಿ ಹೇಳಿದ್ದಾರೆ.

ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ 59 ಪ್ರಕರಣಗಳನ್ನು ಮುಚ್ಚಿಹಾಕಿತ್ತು. ಈಗ ಆರೋಪ ಮಾಡುವುದರಿಂದ ಆ ಪಾಪಗಳು ತೊಳೆದು ಹೋಗುವುದಿಲ್ಲ. ತಮ್ಮ ಭ್ರಷ್ಟಾಚಾರದ ಪ್ರಕರಣಗಳನ್ನು ಮುಚ್ಚಿ ಹಾಕಲು ನನ್ನ ವಿರುದ್ಧ ಕಾಂಗ್ರೆಸ್ ಪ್ರತಿಭಟನೆ ನಡೆಸುತ್ತಿದೆ ಎಂದವರು ತರಾಟೆಗೆ ತೆಗೆದುಕೊಂಡರು.

# ವಾರ ಭವಿಷ್ಯ

**ದಿನಾಂಕ : 05.03.2023 ರಿಂದ 11.03.2023**

**- ಜಯತೀರ್ಥಾಚಾರ್ ವಡೇರ್, ದಾವಣಗೆರೆ.**

**ಮೇಷ (ಅಶ್ವಿನಿ, ಭರಣಿ, ಕೃತ್ತಿಕಾ)**
**(ಚೂ.ಚೇ.ಚೋ.ಲ.ಲಿ.ಉ.ಲೇ.ಲೊ.ಅ.)**

ಮತ್ತೊಬ್ಬರ ವ್ಯವಹಾರಗಳನ್ನು ಟೀಕಿಸುವ ಬದಲು ನಿಮ್ಮ ವ್ಯವಹಾರದ ಅಭಿವೃದ್ಧಿ ಬಗ್ಗೆ ಯೋಚಿಸಿ. ವೃತ್ತಿಯಲ್ಲಿ ಎದುರಾಗಬಹುದಾದ ಸವಾಲುಗಳನ್ನು ಆತ್ಮವಿಶ್ವಾಸದಿಂದ ಎದುರಿಸಿ. ಸಗಟು ಅಥವಾ ಚಿಲ್ಲರೆ ವ್ಯಾಪಾರಿಗಳು ಗ್ರಾಹಕರೊಂದಿಗೆ ಸೌಜನ್ಯದಿಂದ ವರ್ತಿಸುವುದು ಮೇಲು. ಹಣಕಾಸಿನ ಹರಿವು ನಿರೀಕ್ಷಿತ ಮಟ್ಟದಲ್ಲಿರದೇ ಇರುವುದರಿಂದ ಖರ್ಚು-ವೆಚ್ಚಗಳ ಮೇಲೆ ಹಿಡಿತ ಸಾಧಿಸುವುದು ಉತ್ತಮ. ಬೇಸಾಯದಿಂದ ನಿರೀಕ್ಷಿತ ಆದಾಯವಿಲ್ಲದಿದ್ದರೂ, ನಷ್ಟವಂತೂ ಇಲ್ಲ. ಸಂಶೋಧನಾ ರಂಗದಲ್ಲಿರುವವರಿಗೆ ತಮ್ಮ ಹೊಸ ಆವಿಷ್ಕಾರಗಳಿಂದಾಗಿ ಹೆಸರು ಹಾಗೂ ಹಣ ಎರಡನ್ನೂ ಗಳಿಸಲಿದ್ದಾರೆ. ಮಕ್ಕಳ ವಿದ್ಯಾಭ್ಯಾಸದ ಕಡೆ ವಿಶೇಷ ಗಮನವಿರಲಿ. ಗುರುಗಳನ್ನು ಆರಾಧಿಸಿ. ಭಾನು-ಸೋಮ-ಮಂಗಳ-ಶುಭ ದಿನಗಳು.

**ವೃಷಭ (ಕೃತ್ತಿಕಾ, 2,3,4, ರೋಹಿಣಿ, ಮೃಗ 1,2)**
**(ಇ.ಉ.ಎ.ಒ.ವ.ವಿ.ವು.ವೆ.ವೋ)**

ಪ್ರಾಪ್ತ ವಯಸ್ಕರಾದ ಮಕ್ಕಳನ್ನು ವ್ಯಾಪಾರ-ವ್ಯವಹಾರದಲ್ಲಿ ತೊಡಗಿಸುವುದರಿಂದ, ಅವರಿಗೂ ಕೊಂಚ ಅನುಭವವಾಗಲಿದೆ. ಸರ್ಕಾರಿ ನೌಕರರು ತಮ್ಮ ವೃತ್ತಿಯಲ್ಲಿ ಬದ್ಧತೆ ಪ್ರದರ್ಶಿಸುವುದರಿಂದ ಮೇಲಾಧಿಕಾರಿಗಳ ಬೆಂಬಲ ಪಡೆಯುವರು. ಲೇವಾದೇವಿ ವ್ಯವಹಾರವನ್ನು ಸಾಧ್ಯವಾದಷ್ಟು ಕಡಿಮೆ ಮಾಡುವುದು ಉತ್ತಮ. ಕೈಗಾರಿಕೋದ್ಯಮಿಗಳು ಕಾರ್ಮಿಕರು ಕೊಡಮಾಡಬಹುದಾದ ಸಲಹೆ, ಸೂಚನೆಗಳನ್ನು ಪರಿಗಣಿಸುವುದರಿಂದ ಉದ್ಯಮಕ್ಕೆ ಸಂಬಂಧಪಟ್ಟ ಅನೇಕ ಸಮಸ್ಯೆಗಳು ಪರಿಹಾರವಗಲಿವೆ. ಉನ್ನತ ಮಟ್ಟದ ವ್ಯಾಪಾರಿಗಳಿಗೆ ವಿದೇಶದಲ್ಲಿ ಹೂಡಿಕೆ ಮಾಡಲು ಅವಕಾಶ ದೊರೆಯಲಿದೆ. ಆಪ್ತೇಷ್ಟರಿಂದ ಆರ್ಥಿಕ ನೆರವು, ಹಿರಿಯರ ಆಣತಿಯಂತೆ ನಡೆದುಕೊಳ್ಳಿ. ಗುರು-ಶುಕ್ರ-ಶನಿ-ಶುಭ ದಿನಗಳು.

**ಮಿಥುನ (3,4, ಆರಿದ್ರಾ, ಪುನರ್ವಸು 1,2,3)**
**(ಕ.ಕಿ.ಕು.ಘು, ಔ, ಚ.ಕೆ.ಕೋ.ಹ.)**

ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುವವರು ಉದ್ಯೋಗ ನಿಮಿತ್ತ ಕೆಲಕಾಲ ಕುಟುಂಬದಿಂದ ಬಹುದೂರ ಉಳಿಯಬೇಕಾಗುತ್ತದೆ. ಕೆಲವೊಮ್ಮೆ ಸಂದರ್ಭ-ಸನ್ನಿವೇಶಕ್ಕೆ ತಕ್ಕಂತೆ ಹೊಂದಿಕೊಂಡು ಹೋಗುವುದನ್ನು ಕಲಿಯಿರಿ. ಪಟಾಕಿ ಮುಂತಾದ ರಾಸಾಯನಿಕ ವಸ್ತುಗಳ ಬಳಿ ಕೆಲಸ ಮಾಡುವವರು ಹೆಚ್ಚು ಸುರಕ್ಷತೆಯಿಂದಿರುವುದು ಮೇಲು. ಅಗತ್ಯಕ್ಕೆ ತಕ್ಕಂತೆ ಆದಾಯವಿರುವುದರಿಂದ ಹೆಚ್ಚಿನ ಮಟ್ಟದ ನಿರೀಕ್ಷೆ ಬೇಡ. ಹೈನುಗಾರಿಕೆಯನ್ನೇ ನಂಬಿಕೊಂಡಂತಹವರಿಗೆ ತುಸು ನಷ್ಟವಾಗಲಿದೆ. ಅಬಕಾರಿ ಗುತ್ತಿಗೆದಾರರಿಗೆ ಬರಬೇಕಾಗಿರುವ ಬಾಕಿ ವಸೂಲಾಗಲಿದ್ದು, ವಹಿವಾಟು ಹೆಚ್ಚಲಿದೆ. ಸಂತಾನಾಪೇಕ್ಷಿಗಳಿಗೆ ಶುಭ ಸಮಾಚಾರವೊಂದು ಕೇಳಿಬರಲಿದೆ.ಮಹಿಳೆಯರಿಗೆ ಉತ್ತಮ ದಿನಗಳು. ಭಾನು-ಬುಧ, ಗುರು ಶುಭ ದಿನಗಳು.

**ಕರ್ಕಾಟಕ (ಪುನ 4, ಪುಷ್ಯ, ಆಶ್ಲೇಷ)**
**(ಹಿ.ಹು.ಹೆ.ಹೊ.ಡ.ಡಿ.ಡು.ಡೆ.ಡೋ)**

ಸರ್ಕಾರಿ ಬ್ಯಾಂಕ್ ಅಥವಾ ಹಣಕಾಸು ಸಂಸ್ಥೆಗಳಲ್ಲಿ ಕೆಲಸ ಮಾಡುವವರು ನಿರ್ಲಕ್ಷ್ಯ ತೋರಿದಲ್ಲಿ ತಲೆದಂಡ ತೆರಬೇಕಾದೀತು. ಸಮಾಜ ಸೇವೆಯಲ್ಲಿ ತೊಡಗಿಕೊಂಡವರಿಗೆ ಸಂಘ-ಸಂಸ್ಥೆಗಳಿಂದ ಸನ್ಮಾನ, ನಾಟಕ ರಂಗದ ಕಲಾವಿದರಿಗೆ ರಾಜಕೀಯ ಪಕ್ಷಗಳಿಂದ ಹೆಚ್ಚಿನ ಬೇಡಿಕೆ, ಚಿನ್ನಾಭರಣಗಳ ಮೇಲೆ ಹೂಡಿಕೆ ಮಾಡುವ ಮೊದಲು ಮತ್ತೊಮ್ಮೆ ಯೋಚಿಸುವುದು ಉತ್ತಮ. ಮತ್ತೊಬ್ಬರನ್ನು ಅವಹೇಳನ ಮಾಡಲು ಹೋದಲ್ಲಿ ನಿಮಗೇ ಅವಮಾನ ಕಟ್ಟಿಟ್ಟ ಬುತ್ತಿ ಎಂಬುದು ನೆನಪಿರಲಿ. ಹೂವು, ಹಣ್ಣು ತರಕಾರಿ ವ್ಯಾಪಾರಿಗಳಿಗೆ ಭರ್ಜರಿ ಲಾಭವಾಗಲಿದೆ. ವೈಯಕ್ತಿಕ ಆರೋಗ್ಯವನ್ನು ಯಾವುದೇ ಕಾರಣಕ್ಕೂ ಅಲಕ್ಷಿಸಬೇಡಿ. ಅಪರೂಪಕ್ಕೆ ಅತಿಥಿಗಳ ಆಗಮನವಾಗಲಿದೆ. ಕುಲದೇವತಾರಾಧನೆ ಮಾಡಿ ಸೋಮ-ಬುಧ-ಶುಕ್ರ-ಶುಭ ದಿನಗಳು.

**ಸಿಂಹ ( ಮಘ, ಪುಬ್ಬ, ಉತ್ತರ 1)**
**(ಮ.ಮಿ.ಮು.ಮೋ.ವೆ.ಟ.ಟಿ.ಟು.ಟೆ)**

ಮಡದಿ-ಮಕ್ಕಳು ನಿಮ್ಮನ್ನು ಜಿಪುಣರೆಂದು ಜರಿಯುವ ಮೊದಲೇ ಅವರ ಇಷ್ಟಾರ್ಥಗಳನ್ನು ಪೂರೈಸಿ, ವಿದ್ಯಾರ್ಥಿಗಳ ಅಧ್ಯಯನದಲ್ಲಿ ಮಧ್ಯಮ ಫಲಿತಾಂಶ ಬರಲಿದೆ. ಚಿಕ್ಕಮಕ್ಕಳಿಗೆ ಕಿವಿ ಶೂಲೆ ಬಾಧಿಸಲಿದೆ. ಸಹೋದ್ಯೋಗಿಗಳು ನಿಮ್ಮ ವಿರುದ್ಧ ಪಿತೂರಿ ನಡೆಸುವ ಮೊದಲೇ ಅವರ ವಿಶ್ವಾಸ ಗಳಿಸಿ. ಕುಟುಂಬದಲ್ಲಿ ಕಂಡುಬರುವ ನಕಾರಾತ್ಮಕ ಬೆಳವಣಿಗೆಯನ್ನು ಅಲಕ್ಷಿಸಬೇಡಿ. ಧನಾದಾಯ ಸಾಧಾರಣವಾಗಿರುವುದರಿಂದ, ಉಳಿತಾಯದ ವಿಚಾರ ಕೈಬಿಡುವುದು ಉತ್ತಮ. ಅನಾವಶ್ಯಕವಾಗಿ ಸಾಲ ಮಾಡುವುದರಲ್ಲಿ ಅರ್ಥವಿಲ್ಲ. ಕೃಷಿಕರಿಗೆ ನಂಬಿದ ಭೂ ತಾಯಿ ಕೈಬಿಡುವುದಿಲ್ಲ ಎಂಬ ನಂಬಿಕೆಯಿರಲಿ. ಚಿನಿವಾರಪೇಟೆಯಲ್ಲಿ ಭಾರೀ ವಹಿವಾಟು ನಡೆಯಲಿದೆ. ಗೋ ಸೇವೆಯನ್ನು ಮಾಡಿ. ಭಾನು-ಮಂಗಳ-ಬುಧ-ಶುಭ ದಿನಗಳು.

**ಕನ್ಯಾ (ಉತ್ತರಾ 2,3,4, ಹಸ್ತಾ, ಚಿತ್ತಾ 1,2)**
**(ಟೋ.ಪ.ಪಿ.ಪು.ಷ.ಣ.ಠ.ಪೆ.ಪೋ)**

ಉದ್ಯೋಗಾನ್ವೇಷಣೆಯಲ್ಲಿರುವ ಪದವೀಧರರಿಗೆ ಸಾಧಾರಣ ವೇತನದ ನೌಕರಿ ಸಿಗಲಿದ್ದು, ಸದ್ಯದ ಮಟ್ಟಿಗೆ ಅದರಲ್ಲೇ ತೃಪ್ತಿಪಟ್ಟುಕೊಳ್ಳುವುದು ಮೇಲು. ಈ ಹಿಂದೆ ಆರಂಭಿಸಿದ್ದ ಕಾರ್ಯಗಳಿಗೆ ಹಿನ್ನಡೆಯುಂಟಾಗಲಿದೆ. ಆದರೆ ಇದು ತಾತ್ಕಾಲಿಕ ಎಂಬುದು ನೆನಪಿರಲಿ. ಸಂಬಂಧಪಡದ ವಿಷಯಗಳಲ್ಲಿ ಪ್ರವೇಶ ಮಾಡುವುದರಿಂದ ಧನ, ಮಾನಗಳು ನಷ್ಟವಾಗಬಹುದು. ಮನೆಯಲ್ಲಿ ಮಂಗಳ ಕಾರ್ಯಗಳು ನಡೆಯುವ ಎಲ್ಲಾ ಸೂಚನೆಗಳು ಕಂಡುಬರುತ್ತಿವೆ. ರಿಯಲ್ ಎಸ್ಟೇಟ್ ಉದ್ಯಮ ನಿಂತಲ್ಲೇ ತಟಸ್ಥವಾಗಲಿದೆ. ಆದಾಯದ ಮೂಲವನ್ನು ಹೆಚ್ಚಿಸಿಕೊಳ್ಳುವುದಕ್ಕಿಂತ ಇದ್ದದ್ದರಲ್ಲೇ ನಡೆಸಿಕೊಂಡು ಹೋಗುವುದು ಸದ್ಗೃಹಿಣಿಯ ಲಕ್ಷಣ. ಬುಧ-ಗುರು-ಶುಕ್ರ-ಶುಭ ದಿನಗಳು.

**ತುಲಾ (ಚಿತ್ತಾ 3,4, ಸ್ವಾತಿ, ವಿಶಾಖ 1,2,3)**
**(ರ.ರಿ.ರು.ರೆ.ರೊ.ತ.ತಿ.ತು.ತೆ.)**

ನೀವು ಎಷ್ಟೇ ಪ್ರಾಮಾಣಿಕರಾಗಿದ್ದರೂ, ಕೆಲವೊಮ್ಮೆ ಯಾವುದೋ ಕಾಣದ ಕೈವಾಡದ ಒತ್ತಡಕ್ಕೆ ಮಣಿದು, ಮತ್ತೊಬ್ಬರಿಗೆ ಮೋಸ ಮಾಡಬೇಕಾದೀತು. ಹೋಟೆಲ್ ಉದ್ಯಮಿಗಳು ಅನೇಕ ತಾಂತ್ರಿಕ ತೊಂದರೆಗಳನ್ನು ಎದುರಿಸಬೇಕಾದಿತು. ಬೇರೆಯವರ ಕೆಲಸ, ಕಾರ್ಯಗಳಿಗೆಂದು ನಿಮ್ಮ ಅಮೂಲ್ಯ ಸಮಯವನ್ನು ವ್ಯರ್ಥಮಾಡಬೇಕಾದೀತು. ಜವಳಿ ವ್ಯಾಪಾರಿಗಳಿಗೆ ವಹಿವಾಟು ಹೆಚ್ಚಲಿದೆ. ಹಿರಿಯರ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಿರಿ. ದೂರ ಪ್ರಯಾಣ ಆರೋಗ್ಯ ದೃಷ್ಟಿಯಿಂದ ಸೂಕ್ತವಲ್ಲ. ಅಮೂಲ್ಯ ವಸ್ತುಗಳು ಕಳೆದು ಹೋಗದಂತೆ ಸಾಕಷ್ಟು ಎಚ್ಚರ ವಹಿಸಿರಿ. ವಿದ್ಯಾರ್ಥಿಗಳಿಗೆ ಉತ್ತಮ ದಿನಗಳು.

**ವೃಶ್ಚಿಕ (ವಿಶಾಖ 4, ಅನೂ, ಜೇಷ್ಠ)**
**(ತೊ.ನ.ನಿ.ನು.ನೆ.ನೋ.ಯ.ಯಿ.ಯು.)**

ಕಾಲಕ್ಕೆ ತಕ್ಕಂತೆ ಬದಲಾವಣೆಗೆ ಹೊಂದಿಕೊಂಡು ಹೋಗುವುದನ್ನು ಕಲಿಯಿರಿ. ಇದರಿಂದ ಕುಟುಂಬದ ನೆಮ್ಮದಿ ಉಳಿಯುವುದು. ತಾಂತ್ರಿಕ ವಿದ್ಯಾರ್ಥಿಗಳು ಉತ್ತಮ ಫಲಿತಾಂಶಕ್ಕಾಗಿ ಹೆಚ್ಚಿನ ಶ್ರಮವಹಿಸಲೇ ಬೇಕು. ಸದ್ಯದ ಪರಿಸ್ಥಿತಿಯಲ್ಲಿ ವ್ಯಾಪಾರ-ವ್ಯವಹಾರಗಳಲ್ಲಿ ಬಹಳ ಜಾಣ್ಮೆಯಿಂದ ವ್ಯವಹರಿಸಿ, ಹಣಕಾಸಿನ ಪರಿಸ್ಥಿತಿ ಸಾಧಾರಣವಾಗಿರುವುದರಿಂದ ಹೊಸ ಯೋಜನೆಗಳನ್ನು ಜಾರಿಗೆ ತರಲು ಹೋಗಬೇಡಿ. ಮನೆಯಲ್ಲಿ ನಿಮ್ಮ ಅಭಿಪ್ರಾಯಕ್ಕೆ ಹೆಚ್ಚಿನ ಬೆಲೆ ಬರಲಿದೆ. ಸದ್ಯದ ಪರಿಸ್ಥಿತಿಯಲ್ಲಿ ಆಸ್ತಿ ಖರೀದಿ ವಿಚಾರಬೇಡ. ಮಿತ್ರರೊಂದಿಗೆ ಸಹನೆಯಿಂದ ವರ್ತಿಸಿ. ಸೋಮ-ಮಂಗಳ-ಗುರು-ಶುಭ ದಿನಗಳು.

**ಧನಸ್ಸು (ಮೂಲ, ಪೂರ್ವಾಷಾಢ, ಉತ್ತರಾಷಾಢ)**
**(ಯೆ.ಯೋ. ಬ.ಬಿ.ಬು.ಧ.ಫ.ಡ.ಬೆ.)**

ಆರ್ಥಿಕ ನೆರವು ಹಲವು ಮೂಲಗಳಿಂದ ಹರಿದು ಬರಲಿರುವುದರಿಂದ ಹೊಸಮನೆ ಕಟ್ಟಲು ಅಥವಾ ಆಸ್ತಿ ಖರೀದಿ ಮಾಡಲು ಅಡ್ಡಿಯಿಲ್ಲ. ಸಿನಿಮಾ ಛಾಯಾಗ್ರಾಹಕರಿಗೆ ಉತ್ತಮ ಸಂಭಾವನೆ ಅವಕಾಶಗಳು ಹುಡುಕಿ ಕೊಂಡುಬರಲಿವೆ. ಕೆಲವು ವಿಚಾರಗಳಲ್ಲಿ ಮೊಂಡುತನ ಮಾಡದಿರುವುದು ಉತ್ತಮ. ಸ್ನೇಹಿತರೊಂದಿಗಿರುವ ಭಿನ್ನಾಭಿಪ್ರಾಯಗಳನ್ನು ಪರಿಹರಿಸಿಕೊಳ್ಳಿ. ಚುನಾವಣೆಗೆ ಸಿದ್ಧರಾಗಿ ರುವ ಅಭ್ಯರ್ಥಿಗಳು ಪಕ್ಷದ ವರಿಷ್ಠರ ಆದೇಶಕ್ಕನುಗುಣವಾಗಿ ನಡೆದುಕೊಳ್ಳುವುದು ಮೇಲು. ಸಾಂಸ್ಕೃತಿಕ ರಂಗದಲ್ಲಿ ಸಾಧನೆ ಮಾಡಿವವರಿಗೆ ಉತ್ತಮ ಬೆಂಬಲ ದೊರೆಯಲಿದೆ. ಮೋಸ ಹೋಗುವ ಸಂಭವವಿರುವುದರಿಂದ ಹಣಕಾಸಿನ ವಿಚಾರದಲ್ಲಿ ಎಚ್ಚರಿಕೆ ವಹಿಸು ವುದು ಮೇಲು. ಅತಿಥಿಗಳ ಆಗಮನವಾಗಲಿದೆ. ಭಾನು-ಗುರು-ಶುಕ್ರ-ಶುಭ ದಿನಗಳು

**ಮಕರ (ಉತ್ತರಾಷಾಢ 2,3,4, ಶ್ರವಣ, ಧನಿಷ್ಠಾ 1,2)**
**(ಜೊ.ಜ.ಜಿ.ಜೆ.ಶಿ.ಶು.ಶೇ.ಶೋ.ಗ.ಗಿ)**

ನಂಬಿಕೆಯೆಂಬುದು ಬದುಕಿನಲ್ಲಿ ಎಷ್ಟು ಮುಖ್ಯವೋ ನಂಬಿಯೂ ನಂಬದಂತಿರುವುದು ಅಷ್ಟೇ ಮುಖ್ಯ. ಅವರಿವರ ಮನೆಯನ್ನು ಕಾಯುದಕ್ಕಿಂತ, ನಿಮ್ಮ ವೈಯಕ್ತಿಕ ಕೆಲಸಗಳ ಕಡೆ ಗಮನ ಹರಿಸುವುದು ಉತ್ತಮ. ಉನ್ನತ ವ್ಯಾಸಂಗ ಮಾಡುತ್ತಿರುವವರಿಗೆ ನಿರೀಕ್ಷೆಗಿಂತ ಉತ್ತಮ ಫಲಿತಾಂಶ ಬರಲಿದೆ. ಕಮೀಷನ್ ಆಧಾರದಲ್ಲಿ ಕೆಲಸ ಮಾಡುವವರಿಗೆ ಉತ್ತಮ ಆದಾಯವಾಗಲಿದೆ. ಪ್ರತಿಭಾವಂತರು, ತಾವು ಅಪೇಕ್ಷಿಸಿದ್ದ ಕಂಪನಿಗಳಲ್ಲೇ ಉದ್ಯೋಗವನ್ನು ಗಿಟ್ಟಿಸಿಕೊಳ್ಳುವುದರಲ್ಲಿ ಯಶಸ್ವಿಯಾಗುವರು. ಅಪರಿಚಿತ ವ್ಯಕ್ತಿಗಳ ಮಾತಿಗೆ ಮರುಳಾಗಿ ಹಣ ಕಳೆದುಕೊಳ್ಳುವ ಸಂಭವವಿದೆ. ನವದಂಪತಿಗಳಲ್ಲಿದ್ದ ಮನಸ್ತಾಪ ದೂರವಾಗಲಿದೆ. ಭಾನು-ಮಂಗಳ-ಶನಿ-ಶುಭ ದಿನಗಳು.

**ಕುಂಭ (ಧನಿಷ್ಠಾ, ಶತಭಿಷಾ, ಪೂರ್ವಾಭಾದ್ರ 1,2,3)**
**(ಗು.ಗೆ.ಗೊ.ಸ.ಸಿ.ಸು.ಸೆ.ಸೋ.ದ)**

ಯಾವುದೇ ಕಾರಣಕ್ಕೂ ಆತ್ಮಾಭಿಮಾನವನ್ನು ಬಿಡದೇ ಮುನ್ನಡೆಯಿರಿ. ಇಷ್ಟು ದಿನಗಳ ಕಾಲ ಯಾರನ್ನು ನಂಬಿದ್ದಿರೋ ಅವರಿಂದಲೇ ಮೋಸ ಹೋಗುವ ಸಂಭವವಿದೆ. ಆರ್ಥಿಕ ಹರಿವು ನಿಮ್ಮ ನಿರೀಕ್ಷೆಯಂತಿದೆ. ನಿವೃತ್ತಿಯಂಚಿನಲ್ಲಿರು ವವರು ತಮ್ಮ ಮುಂದಿನ ಜೀವನದ ಬಗ್ಗೆ ಈಗಲೇ ಒಂದು ನಿರ್ಧಾರಕ್ಕೆ ಬರುವುದು ಮೇಲು. ಆಸ್ತಿ-ವಿಚಾರದಲ್ಲಿ ಅನುಭವಿಗಳಾದ ಹಿರಿಯರ ಮಾತಿನಂತೆ ನಡೆದುಕೊಂಡಲ್ಲಿ ನಿಮಗೇ ಹೆಚ್ಚಿನ ಲಾಭವಾಗಲಿದೆ. ಸಂಗಾತಿಯ ಕಡೆಯಿಂದ ನೆರವು ಸಿಗಲಿದ್ದು, ಅದನ್ನು ನಿಸ್ಸಂಕೋಚವಾಗಿ ತೆಗೆದುಕೊಳ್ಳಿ. ಚಿಕ್ಕಮಕ್ಕಳಿಗೆ ಶೀತಬಾಧೆ ಅತಿಯಾಗಿ ಕಾಡಲಿದೆ. ವ್ಯವಹಾರದಲ್ಲಿ ಸಾಕಷ್ಟು ಅಭಿವೃದ್ಧಿ ಕಂಡುಬರಲಿದೆ. ಸೋಮ-ಶುಕ್ರ-ಶನಿ-ಶುಭ ದಿನಗಳು.

**ಮೀನ (ಪೂರ್ವಾಭಾದ್ರ 4, ಉತ್ತರಾಭಾದ್ರ, ರೇವತಿ)**
**(ದಿ.ದು.ಖ.ಝ.ಥ.ದೆ.ದೋ.ಖ.ಚ.ಚಿ.)**

ಕಾನೂನು ತಜ್ಞರಿಗೆ ಅವರದ್ದೇ ಆದ ತಪ್ಪಿನಿಂದಾಗಿ ಹಿನ್ನಡೆಯಾಗಲಿದೆ. ಮಕ್ಕಳ ಮುಂದಿನ ಭವಿಷ್ಯಕ್ಕಾಗಿ ಹಣವನ್ನು ಹೂಡಿಕೆ ಮಾಡುವಿರಿ. ಹಿರಿಯರಿಂದ ಉಡುಗೊರೆ ನಿಮ್ಮ ಕೈಸೇರಲಿದೆ. ವಿದೇಶದಲ್ಲಿ ಉನ್ನತಾಧ್ಯಯನ ಮಾಡಬೇಕೆಂಬುವವರಿಗೆ ಸರ್ಕಾರದಿಂದ ಹಾಗೂ ಸಮಾಜದಿಂದ ಆರ್ಥಿಕ ನೆರವು ಸಿಗಲಿದೆ. ಉದ್ಯಮಿಗಳು ತಮ್ಮ ಪ್ರತಿಸ್ಪರ್ಧಿಗಳ ವಿಚಾರದಲ್ಲಿ ಬಹಳ ಎಚ್ಚರದಿಂದಿರುವುದು ಮೇಲು. ವಾಹನಗಳ ಬಿಡಿಭಾಗಗಳ ಮಾರಾಟದಿಂದ ಹೆಚ್ಚಿನ ಲಾಭ. ಅನಿರೀಕ್ಷಿತವಾಗಿ ಸಾಧು-ಸಂತರ ಹಾಗೂ ಕುಲದೇವತಾದರ್ಶನ ಭಾಗ್ಯ ನಿಮ್ಮದಾಗಲಿದೆ. ಯುವಕರಿಗೆ ಉತ್ತಮ ದಿನಗಳು. ಸೋಮ-ಬುಧ-ಗುರು-ಶುಭ ದಿನಗಳು.

**ವಿಶೇಷ ದಿನಗಳು : ದಿನಾಂಕ: 6-3-2023 ನೇ ಸೋಮವಾರ ಹೋಳಿ ಹುಣ್ಣಿಮೆ ಕಾಮದಹನ. ದಿನಾಂಕ: 8-3-2023 ನೇ ಬುಧವಾರ ಶ್ರೀ ಸತ್ಯಬೋಧರ ಆರಾಧನೆ (ಸವಣೂರು) ದಿನಾಂಕ: 10-3-2023 ನೇ ಶುಕ್ರವಾರ ಶ್ರೀ ವಾದಿರಾಜ ಸ್ವಾಮಿಗಳ ಉತ್ತರಾರಾಧನೆ ( ಸೋಂದಾ) ದಿನಾಂಕ: 11-3-2023 ನೇ ಶನಿವಾರ ಶ್ರೀ ವ್ಯಾಸರಾಜರ ಆರಾಧನೆ ( ನವ ವೃಂದಾವನ) ಸಂಕಷ್ಟ ಚತುರ್ಥಿ.**

# ನಗರದಲ್ಲಿ ಇಂದು ಸರ್ಕಾರಿ ಯೋಜನೆ ಫಲಾನುಭವಿಗಳ ಸಮ್ಮೇಳನ



## 30 ಸಾವಿರಕ್ಕೂ ಅಧಿಕ ಫಲಾನುಭವಿಗಳು ಭಾಗಿ - ಸವಲತ್ತುಗಳ ವಿತರಣೆ

ದಾವಣಗೆರೆ, ಮಾ.4- ಕೇಂದ್ರ ಹಾಗೂ ರಾಜ್ಯ ಸರ್ಕಾರ ಪುರಸ್ಕೃತ ಯೋಜನೆಗಳ ಸೌಲಭ್ಯ ಪಡೆದ ಜಿಲ್ಲೆಯ ಫಲಾನುಭವಿಗಳ ಸಮ್ಮೇಳನವು ನಾಳೆ ದಿನಾಂಕ 5 ರ ಭಾನುವಾರ ಬೆಳಿಗ್ಗೆ 11.30 ಕ್ಕೆ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ. 30 ಸಾವಿರಕ್ಕೂ ಅಧಿಕ ಫಲಾನುಭವಿಗಳು ಸಮ್ಮೇಳನದಲ್ಲಿ ಭಾಗವಹಿಸಲಿದ್ದಾರೆ, ಕೇಂದ್ರ ಸಂಸದೀಯ ವ್ಯವಹಾರ, ಗಣಿ ಹಾಗೂ ಕಲ್ಲಿದ್ದಲು ಖಾತೆ ಸಚಿವ ಪ್ರಹ್ಲಾದ್ ಜೋಶಿ ಅವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ ಎಂದು ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ಮಾಹಿತಿ ನೀಡಿದ್ದಾರೆ.

ಫಲಾನುಭವಿಗಳ ಸಮ್ಮೇಳನದ ಸಿದ್ಧತೆ ಕುರಿತಂತೆ ಶನಿವಾರ ಜಿಲ್ಲಾ ಕ್ರೀಡಾಂಗಣಕ್ಕೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಎ. ಚೆನ್ನಪ್ಪ ಅವರೊಂದಿಗೆ ಭೇಟಿ ನೀಡಿದ ಅವರು, ವೇದಿಕೆ ನಿರ್ಮಾಣ ಹಾಗೂ ವಸ್ತು ಪ್ರದರ್ಶನ ಮಳಿಗೆಗಳ ನಿರ್ಮಾಣ, ಫಲಾನುಭವಿಗಳಿಗೆ ಊಟ, ಸಾರಿಗೆ ವ್ಯವಸ್ಥೆ, ಕುರಿತಂತೆ ಪರಿಶೀಲನೆ ನಡೆಸಿ ಮಾತನಾಡಿದರು.

ಕಳೆದ ಮೂರು ವರ್ಷಗಳ ಅವಧಿಯಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿವಿಧ ಯೋಜನೆಗಳಡಿ ಸೌಲಭ್ಯ ಪಡೆದ ಫಲಾನುಭವಿಗಳು ಹಾಗೂ ಹೊಸದಾಗಿ ಸೌಲಭ್ಯ ಮಂಜೂರಾದ ಫಲಾನುಭವಿಗಳನ್ನು ಸಮ್ಮೇಳಕ್ಕೆ ಆಹ್ವಾನಿಸಲಾಗಿದೆ ಎಂದು ಅವರು ಹೇಳಿದರು.

**30 ಸಾವಿರ ಫಲಾನುಭವಿಗಳು:** ಫಲಾನುಭವಿಗಳ ಸಮಾವೇಶದಲ್ಲಿ ಜಿಲ್ಲೆಯ 6 ತಾಲ್ಲೂಕುಗಳಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರದ ಯೋಜನೆಯಡಿ ಕಳೆದ 3 ವರ್ಷಗಳ ಅವಧಿಯಲ್ಲಿ ವಿವಿಧ 24 ಇಲಾಖೆಗಳಡಿ ಸೌಲಭ್ಯ ಪಡೆದ ಅಂದಾಜು 25 ರಿಂದ 30 ಸಾವಿರ ಫಲಾನುಭವಿಗಳು ಸಮ್ಮೇಳನದಲ್ಲಿ ಭಾಗವಹಿಸಲಿದ್ದಾರೆ. ಈ ಪೈಕಿ ಹೊಸದಾಗಿ ವಿವಿಧ ಇಲಾಖೆಯ ಆಯ್ದ ಫಲಾನುಭವಿಗಳಿಗೆ ಮಂಜೂರಾತಿ ಪತ್ರ ಹಾಗೂ ವಿವಿಧ ಸಲಕರಣೆಗಳನ್ನು ವಿತರಿಸಲಾಗುವುದು ಹಾಗೂ ಫಲಾನುಭವಿಗಳಿಗೆ ಸರ್ಕಾರದ ಯೋಜನೆಗಳ ಕುರಿತಂತೆ ಮಾಹಿತಿ ನೀಡಲಾಗುವುದು.

**ಬಸ್ ವ್ಯವಸ್ಥೆ :** ಜಿಲ್ಲೆಯ ವಿವಿಧ ಗ್ರಾಮಗಳಿಂದ ಸಮ್ಮೇಳಕ್ಕೆ ಆಗಮಿಸುವ ಫಲಾನುಭವಿಗಳಿಗೆ ಪ್ರಯಾಣಕ್ಕೆ ಅನುಕೂಲವಾಗಲು 151 ಕೆ.ಎಸ್.ಆರ್.ಟಿ.ಸಿ ಬಸ್ ಹಾಗೂ ಇತರೆ ವಾಹನ ಸೇರಿದಂತೆ 300 ವಾಹನಗಳ ವ್ಯವಸ್ಥೆಯನ್ನು ಮಾಡಲಾಗಿದೆ, ಪ್ರತಿ ವಾಹನಕ್ಕೂ ಸಮನ್ವಯ ಅಧಿಕಾರಿಗಳನ್ನು ನಿಯೋಜಿಸಿ, ವ್ಯವಸ್ಥಿತವಾಗಿ ಫಲಾನುಭವಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಲು ಕ್ರಮ ಕೈಗೊಳ್ಳಲಾಗಿದೆ. ಮಧ್ಯಾಹ್ನ ಊಟದ ವ್ಯವಸ್ಥೆ ಕುಡಿಯುವ ನೀರಿನ ವ್ಯವಸ್ಥೆ ಇಲಾಖಾವಾರು ಫಲಾನುಭವಿಗಳಿಗೆ ಆಸನ ವ್ಯವಸ್ಥೆ, ಮಾಡಲಾಗಿದೆ.

400 ಕಾರ್ಮಿಕ ಮಕ್ಕಳಿಗೆ ಟ್ಯಾಬ್ ವಿತರಣೆ, ವಾಲ್ಮೀಕಿ ಅಭಿವೃದ್ಧಿ ನಿಗಮದಿಂದ 140 ದ್ವಿಚಕ್ರ ವಾಹನ ವಿತರಣೆ, ವಿಕಲಚೇತನರಿಗೆ ಟಾಕಿಂಗ್ ಲ್ಯಾಪ್ ಟಾಪ್, ಶ್ರವಣ ಸಾಧನ, ವಿವಾಹ ಪ್ರೋತ್ಸಾಹ ಧನ, ಕೇಂದ್ರ ಪುರಸ್ಕೃತ ರೇಷ್ಮೆ ಸಮಗ್ರ ಯೋಜನೆಯಡಿ ರೈತರಿಗೆ ಸೌಲಭ್ಯ, ಉಣ್ಣೆ ಕಟಾವುಯಂತ್ರ ವಿತರಣೆ, ಲಘು ನೀರಾವರಿ ಯೋಜನೆ, ಕೃಷಿ ಯಂತ್ರೀಕರಣ ಯೋಜನೆ, ಕೃಷಿ ಸಿಂಚಾಯಿ ಯೋಜನೆ, ಅಂತರ್ಜಾತಿ ವಿವಾಹ ಪ್ರೋತ್ಸಾಹ ಧನ, ಐರಾವತ ಯೋಜನೆ, ಗಂಗಾ ಕಲ್ಯಾಣ ಯೋಜನೆ, ಮಹಿಳಾ ಸ್ವ-ಸಹಾಯ ಸಂಘಗಳಿಗೆ ಪ್ರೋತ್ಸಾಹ ಧನ, ವೃದ್ಧಾಪ್ಯ ವೇತನ, ವಿಧವಾ ವೇತನ ಮನಸ್ವಿನಿ ಯೋಜನೆ, ಅಂಗವಿಕಲರ ಯೋಜನೆಯ ಫಲಾನುಭವಿಗಳಿಗೆ ಸೌಲಭ್ಯ ವಿತರಣೆ, ಮೀನುಗಾರಿಕೆ ಸಲಕರಣೆ ಕಿಟ್, ವಿವಿಧ ವಸತಿ ಯೋಜನೆಯಡಿ ಹಕ್ಕುಪತ್ರ, ನರೇಗಾ ಯೋಜನೆ ಸೇರಿದಂತೆ ವಿವಿಧ ಯೋಜನೆಗಳ ಆಯ್ದಾ ಫಲಾನುಭವಿಗಳ ಸೌಲಭ್ಯ ವಿತರಣೆ ಮಾಡಲಾಗುವುದು.

**ಮಾಹಿತಿ ಮಳಿಗೆ:** ಸರ್ಕಾರದ ಯೋಜನೆಗಳ ಮಾಹಿತಿ ನೀಡಿ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ, ಜಲಜೀವನ್ ಮಿಷನ್ ಒಳಗೊಂಡಂತೆ ವಿವಿಧ ಇಲಾಖೆಯ ಮಾಹಿತಿ ಕಣಜ ಹೆಸರಿನಲ್ಲಿ 57 ಮಳಿಗೆಗಳನ್ನು ಸ್ಥಾಪಿಸಲಾಗಿದೆ. ಇದಲ್ಲದೇ ಖಾದಿ ಮಂಡಳಿ, ಲಿಡಕರ್ ಮಳಿಗೆ ಸೇರಿದಂತೆ ವಿವಿಧ ಸ್ವ-ಸಹಾಯ ಗುಂಪುಗಳ ಹಾಗೂ ಸಂಜೀವಿನಿ ಒಕ್ಕೂಟಗಳು ಉತ್ಪಾದಿಸುವ ವಸ್ತುಗಳ ಮಾರಾಟ ಹಾಗೂ ಪ್ರದರ್ಶನ ವ್ಯವಸ್ಥೆ ಸಹ ಮಾಡಲಾಗಿದೆ.

**ಸಚಿವರು ಭಾಗಿ:** ಕೇಂದ್ರ ಕಲ್ಲಿದ್ದಲು ಗಣಿ ಹಾಗೂ ಸಂಸದಿಯ ವ್ಯವಹಾರಗಳ ಸಚಿವ ಪ್ರಹ್ಲಾದ್ ಜೋಶಿ, ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ. ಬಸವರಾಜ, ಸಹಕಾರಿ ಸಚಿವ ಸೋಮಶೇಖರ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಚಿವ ಹಾಲಪ್ಪ ಆಚಾರ್ಯ, ಸಂಸದ ಜಿ.ಎಂ. ಸಿದ್ದೇಶ್ವರ ಹಾಗೂ ಜಿಲ್ಲೆಯ ಜನಪ್ರತಿನಿಧಿಗಳು ಭಾಗವಹಿಸಲಿದ್ದಾರೆ.

# ಪಕ್ಷಗಳಿಂದ ವಿಶ್ವಕರ್ಮ ಸಮುದಾಯದ ಕಡೆಗಣನೆ

(1ನೇ ಪುಟದಿಂದ) ಬೇಡಿಕೆಗಳನ್ನು ಈಡೇರಿಸುವಂತೆ ಸರ್ಕಾರಕ್ಕೆ ಅನೇಕ ಬಾರಿ ಮನವಿಗಳನ್ನು ಸಹ ನೀಡುತ್ತಾ ಬಂದಿದ್ದರೂ ಪ್ರಯೋಜನವಾಗಿಲ್ಲ. ಸಮಾಜ ಯಾವುದೇ ಇಂಜಿನಿಯರಿಂಗ್, ವೈದ್ಯಕೀಯ ಅಥವಾ ಇನ್ನಿತರೆ ಶಿಕ್ಷಣ ಸಂಸ್ಥೆಗಳನ್ನು ಸಹ ಹೊಂದಿಲ್ಲ. ಶೈಕ್ಷಣಿಕ ಪ್ರಗತಿಗಾಗಿ ಮತ್ತು ಸ್ವಯಂ ಉದ್ಯೋಗದ ಆಧುನಿಕ ತರಬೇತಿ ಪಡೆಯಲು ಪಂಚಶಿಲ್ಪ ತರಬೇತಿ ಕೇಂದ್ರಗಳನ್ನು ಪ್ರತಿ ಜಿಲ್ಲಾ ಕೇಂದ್ರಗಳಲ್ಲಿ ಸ್ಥಾಪನೆ ಮಾಡುವ ಅಗತ್ಯವಿದೆ ಎಂದರು.

ಜಿಲ್ಲೆಯಲ್ಲಿ ಹೊಸ ಪೀಠ ಸ್ಥಾಪನೆ ಆಲೋಚನೆ ಮಾಡುತ್ತಿರುವುದು ಒಳ್ಳೆಯ ಬೆಳವಣಿಗೆಯಲ್ಲ. ಈಗಿರುವ ಮಠಗಳನ್ನು ಅಭಿವೃದ್ಧಿ ಪಡಿಸದೇ ಹೊಸ ಹೊಸ ಮಠಗಳನ್ನು ಸ್ಥಾಪನೆ ಮಾಡಿದರೆ ಸಮಾಜ ಛಿದ್ರವಾಗುತ್ತದೆ. ಭಿನ್ನಾಭಿಪ್ರಾಯಗಳನ್ನು ಮರೆತು ಅನ್ಯೋನ್ಯತೆ ಭಾವನೆಯಿಂದ, ಸಮಾಜದ ಮುಖಂಡರೆಲ್ಲಾ ಒಗ್ಗಟ್ಟಾಗಿ ಸಮಾಜದ ಸರ್ವಾಂಗೀಣ ಅಭಿವೃದ್ಧಿ ಬಗ್ಗೆ ಚಿಂತನೆ ಮಾಡುವ ಅವಶ್ಯ ಇದೆ ಎಂದು ಹಿತ ನುಡಿದರು.

ಭಗವಾನ್ ಶ್ರೀ ವಿಶ್ವಕರ್ಮ ದೇವರ ಕುರಿತು ಹಂಪಿ ವಿವಿ ಪ್ರಾಧ್ಯಾಪಕ ಡಾ. ವೀರೇಶ್ ಬಡಿಗೇರ್ ಉಪನ್ಯಾಸ ನೀಡಿದರು. ನಿವೃತ್ತ ಅಭಿಯೋಜಕ ಎಸ್.ವಿ. ಪಾಟೀಲ್ ಮಾತನಾಡಿದರು.

ಮಠಾಧಿಪತಿಗಳ ಒಕ್ಕೂಟದ ಅಧ್ಯಕ್ಷರಾದ ಸಿಂಧಗಿ ಶ್ರೀ ಮೂರುಝಾವ ಮಠದ ಶ್ರೀ ರಾಮಚಂದ್ರ ಮಹಾಸ್ವಾಮಿಗಳು, ಚನ್ನಗಿರಿ ತಾಲ್ಲೂಕು ವಡ್ಡನಾಳ್ ಸಾವಿತ್ರಿ ಮಠ ಕಾಶೀ ಪೀಠದ ಅಷ್ಟೋತ್ತರ ಶತಶ್ರೀ ಶಂಕರಾತ್ಮಾನಂದ ಸರಸ್ವತೀ ಮಹಾಸ್ವಾಮಿಗಳು, ತಮಿಳುನಾಡು ಶ್ರೀ ನವಶಕ್ತಿ ಮಹಾ ಕಾಳಿಕ ಪೀಠದ ವಿಶ್ವ ಬ್ರಹ್ಮಶ್ರೀ ಶಿವಯೋಗಿ ಶ್ರೀನಿವಾಸ ಆಚಾರ್ಯ ಸಾನ್ನಿಧ್ಯ ವಹಿಸಿದ್ದರು.

ಕರವೇ ರಾಜ್ಯಾಧ್ಯಕ್ಷ ಪ್ರವೀಣಶೆಟ್ಟಿ, ದಾಸ ಸುಶೀಲ, ಬೇಗೂರು ನಾಗರಾಜ್, ಹೆಚ್. ಮೌನೇಶಚಾರ್, ಬಿಜೆಪಿ ಹಿಂದುಳಿದವ ವರ್ಗಗಳ ಮೋರ್ಚಾ ಕೋಶಾಧ್ಯಕ್ಷ ಎಲ್.ಎಸ್. ಆನಂದಪ್ಪ, ಅಭಾವಿ ಪರಿಷತ್ ರಾಜ್ಯ ಮಹಿಳಾ ಅಧ್ಯಕ್ಷೆ ಪ್ರಕೃತಿ ಸುರೇಶ್, ಟಿ. ಮಹಾರುದ್ರಾಚಾರ್, ಹೇಮಣ್ಣ, ನಾಗರಾಜ್ ಹರಿಹರ, ಎ. ಪಾಲಾಕ್ಷಚಾರ್, ಕೆ.ಬಿ. ಮಂಜಪ್ಪಚಾರ್, ಹೆಚ್. ನಾಗರಾಜ್, ಗಜೇಂದ್ರ ಜಗನ್ನಾಥ್, ತಿಪ್ಪೇಸ್ವಾಮಿ ಅಮ್ಮನ ಗುಡ್ಡ, ಮಣಿಕಂಠ ಚಾರ್, ಜಯಾಚಾರ್, ಎಂ.ಈ.ಮೌನೇಶ್ವರ ಚಾರ್, ಕೆ. ಸೋಮ ಶೇಖರಚಾರ್, ಬಾವಿಹಾಳ್ ನಾಗರಾಜಚಾರ್, ಜಕಣಾಚಾರ್ ಮತ್ತಿತರರು ಉಪಸ್ಥಿತರಿದ್ದರು.

ಮಹಿಳಾ ಮಂಡಳಿಯವರು ಪ್ರಾರ್ಥಿಸಿದರು. ಎ.ಬಿ. ರವಿ ಕಾರ್ಯಕ್ರಮ ನಿರೂಪಿಸಿದರು. ಪರಿಷತ್ ರಾಷ್ಟ್ರೀಯ ಅಧ್ಯಕ್ಷ ಹೆಚ್.ವಿ. ಸತೀಶ್ ಕುಮಾರ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾಳಾಚಾರ್ ಸ್ವಾಗತಿಸಿದರು.

# ಹರಿಹರ : 11ಕ್ಕೆ ಪ್ರಜಾಧ್ವನಿ ಯಾತ್ರೆ



(1ನೇ ಪುಟದಿಂದ) ಪ್ರಜ್ವಾಧ್ವನಿ ಯಾತ್ರೆಯನ್ನು ಬರ ಮಾಡಿಕೊಳ್ಳಲಾಗುತ್ತದೆ. ನಂತರ ಗಾಂಧಿ ಮೈದಾನದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದೆ ಎಂದರು.

ಈ ಸಮಾರಂಭದಲ್ಲಿ ಪ್ರಚಾರ ಸಮಿತಿಯ ಅಧ್ಯಕ್ಷ ಎಂ.ಬಿ. ಪಾಟೀಲ್, ಕಾಂಗ್ರೆಸ್ ಪಕ್ಷದ ಕಾರ್ಯಾಧ್ಯಕ್ಷ ಸತೀಶ್ ಜಾರಕಿಹೊಳಿ, ಶಾಸಕ ಶಾಮನೂರು ಶಿವಶಂಕರಪ್ಪ, ಮಾಜಿ ಸಚಿವರಾದ ಎಸ್.ಎಸ್. ಮಲ್ಲಿಕಾರ್ಜುನ್, ಜಮೀರ್ ಆಹ್ಮದ್, ಹೆಚ್. ಆಂಜನೇಯ ಸೇರಿದಂತೆ ಹಲವಾರು ನಾಯಕರು ಭಾಗವಹಿಸಲಿದ್ದಾರೆ.

ನಗರಸಭೆ ಸದಸ್ಯ ಶಂಕರ್ ಖಟಾವ್ಕರ್ ಮಾತನಾಡಿ, ಬಿಜೆಪಿ ಪಕ್ಷದವರ ಆಡಳಿತವನ್ನು ನೋಡಿ ಜನರು ಬಹಳ ರೋಸಿ ಹೋಗಿದ್ದಾರೆ ಎಂದರು.

ಕೆಪಿಸಿಸಿ ಸದಸ್ಯ ಬಿ. ರೇವಣಸಿದ್ದಪ್ಪ ಮಾತನಾಡಿ, ಪ್ರಜಾಧ್ವನಿ ಯಾತ್ರೆಯಲ್ಲಿ 25 ಸಾವಿರಕ್ಕೂ ಹೆಚ್ಚು ಜನರು ಭಾಗವಹಿಸಲಿದ್ದಾರೆ ಎಂದು ಹೇಳಿದರು.

ಮಾಜಿ ನಗರಸಭೆ ಸದಸ್ಯ ಬಿ.ಕೆ. ರೆಹಮಾನ್ ಖಾನ್ ಮಾತನಾಡಿ, ದೇಶದ ಗತಿ ಸಬ್ ಕಾ ಸಾತ್ ಸಬ್ ಕಾ ವಿಕಾಸ್ ಆಗದೆ ಸಬ್ ಕಾ ಬರ್ ಬಾದ್ ಆಗಿ ಪರಿವರ್ತನೆಯಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಸುರೇಶ್ ಹಾದಿಮನಿ, ಎಲ್. ಬಿ.ಹನುಮಂತಪ್ಪ, ಅಭಿದಾಲಿ, ಏಜಾಜ್ ಆಹ್ಮದ್, ಮಹಮ್ಮದ್ ಫೈರೋಜ್, ವಿದ್ಯಾ, ಭಾಗ್ಯಮ್ಮ, ಏಕಾಂತಪ್ಪ, ನೇತ್ರಾವತಿ, ಕೆ.ಪಿ.ಗಂಗಾಧರ್, ಬಿ.ಎನ್ ರಮೇಶ್, ಹಬೀಬ್, ನಜೀರ್, ರಮೇಶ್ ನಾಯ್ಕ್ ಇತರರು ಹಾಜರಿದ್ದರು.

# ಗ್ಯಾಸ್ ಬೆಲೆ ಏರಿಕೆ ಖಂಡಿಸಿ ಕಾಂಗ್ರೆಸ್ ಪ್ರತಿಭಟನೆ



**ಜಗಳೂರು**

ಜಗಳೂರು, ಮಾ. 4- ಕೇಂದ್ರ ಸರ್ಕಾರ ದಿನಬಳಕೆಯ ಗ್ಯಾಸ್ ಸಿಲಿಂಡರ್ ಬೆಲೆಯನ್ನು ಹೆಚ್ಚಿಸಿರುವುದನ್ನು ಖಂಡಿಸಿ ಬ್ಲಾಕ್ ಕಾಂಗ್ರೆಸ್ ಕಾರ್ಯಕರ್ತರು ಇಂದು ಪ್ರತಿಭಟನಾ ಮೆರವಣಿಗೆ ನಡೆಸಿ ಅವರಿಗೆ ಮನವಿ ಸಲ್ಲಿಸಿದರು.

ಪಟ್ಟಣದ ಮಿನಿ ವಿಧಾನಸೌಧದ ಮುಂದೆ ಬಹಿರಂಗ ಸಭೆಯಲ್ಲಿ ಮಾತನಾಡಿದ ಮಾಜಿ ಶಾಸಕ ಹೆಚ್.ಪಿ. ರಾಜೇಶ್, ಬಡವರ ಬಗ್ಗೆ ಬಿಜೆಪಿಯ ಕೇಂದ್ರ ಹಾಗೂ ರಾಜ್ಯ ಸರ್ಕಾರಕ್ಕೆ ಯಾವುದೇ ಕಾಳಜಿ ಇಲ್ಲ, ಜನವಿರೋಧಿ ಸರ್ಕಾರಗಳು ಎಂದು ಟೀಕಿಸಿದರು.

ಜನರ ದಿನಬಳಕೆಯ ಸಿಲಿಂಡರ್ ಬೆಲೆಯನ್ನು ಸತತವಾಗಿ ಏರಿಸಿದೆ. ಅಗತ್ಯ ವಸ್ತುಗಳ ದರಗಳು ಸಹ ಹೆಚ್ಚಳವಾಗಿವೆ. ಬಡಜನರ ಬದುಕು ದುಸ್ತರವಾಗಿದೆ. ಈ ಬಗ್ಗೆ ಯಾವುದೇ ಕಾಳಜಿ ಈ ಸರ್ಕಾರಕ್ಕೆ ಇಲ್ಲ ಎಂದರು. ರೈತ, ಬಡಜನರ ವಿರೋಧಿ ಸರ್ಕಾರದ ಬೆಲೆ ಏರಿಕೆಯ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಇಂದು ಕಾಂಗ್ರೆಸ್ ಪಕ್ಷ ಪ್ರತಿಭಟನೆ ನಡೆಸಿದೆ ಎಂದು ರಾಜೇಶ್ ತಿಳಿಸಿದರು.

ಕೆಪಿಸಿಸಿ ಎಸ್ಟಿ ಘಟಕದ ರಾಜ್ಯಾಧ್ಯಕ್ಷ ಕೆ.ಪಿ. ಪಾಲಯ್ಯ ಮಾತನಾಡಿ, ಕೇಂದ್ರ ಸರ್ಕಾರ ಅಗತ್ಯ ಬೆಲೆ ಹೆಚ್ಚಿಸುವ ಮೂಲಕ ಬಡಜನರ ಬವಣೆಯನ್ನು ಹೆಚ್ಚಿಸಿದೆ ಎಂದರು.

ಬಿಜೆಪಿ ಶಾಸಕ ಮಾಡಾಳು ವಿರೂಪಾಕ್ಷಪ್ಪ ಅವರ ಭ್ರಷ್ಟಾಚಾರದ ಹಿನ್ನೆಲೆಯಲ್ಲಿ ಲೋಕಾಯುಕ್ತರ ತನಿಖೆ ನಡೆಯುತ್ತಿರುವುದು ನೋಡಿದರೆ ಈ ಸರ್ಕಾರ 40 ಪರ್ಸೆಂಟ್ ಕಮೀಷನಲ್ಲಿ ಶೇ. 80 ಕಮೀಷನ್ ಪಡೆಯಲು ಮುಂದಾಗಿದೆ ಎಂದು ಟೀಕಿಸಿದರು.

ಪ್ರತಿಭಟನೆಯಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಷಂಷೀರ್ ಅಹ್ಮದ್, ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿ ಪಲ್ಲಾಗಟ್ಟೆ ಶೇಖರಪ್ಪ, ತಾಲ್ಲೂಕು ಉಸ್ತುವಾರಿ ಕಲ್ಲೇಶ್‌ರಾಜ್ ಪಟೇಲ್, ಕಾಂಗ್ರೆಸ್ ಪದಾಧಿಕಾರಿಗಳಾದ ಸಿ. ತಿಪ್ಪೇಸ್ವಾಮಿ, ಬಸಾಪುರ ರವಿಚಂದ್ರ, ಪ.ಪಂ. ಸದಸ್ಯರಾದ ಶಕೀಲ್ ಅಹ್ಮದ್, ರವಿ ಕುಮಾರ್, ಅಹ್ಮದ್ ಅಲಿ ಭಾಗವಹಿಸಿದ್ದರು.

# ಗುತ್ತಿಗೆ ನೌಕರರ ಸಂಭಾವನೆ ಶೇ.15 ಹೆಚ್ಚಳ

(1ನೇ ಪುಟದಿಂದ) ಎನ್‌ಎಚ್‌ಎಂ ಮೆಡಿಕಲ್ ಅಧಿಕಾರಿಗಳಿಗೆ (ಎಂಬಿಬಿಎಸ್, ಆಯುಷ್, ಆರ್‌ಬಿಎಸ್‌ಕೆ, ದಂತವೈದ್ಯ ಸರ್ಜನ್‌ಗಳು) ಕೂಡ ಶೇ.15 ರಷ್ಟು ಸಂಭಾವನೆ ಹೆಚ್ಚಿಸಲಾಗಿದೆ.

ಎನ್‌ಎಚ್‌ಎಂ ಗುತ್ತಿಗೆ ತಜ್ಞರಿಗೆ, 3-5 ವರ್ಷಗಳ ಸೇವೆಯಲ್ಲಿರುವವರಿಗೆ ಶೇ.5, 5-10 ವರ್ಷಗಳ ಸೇವೆಯಲ್ಲಿರುವವರಿಗೆ ಶೇ.10, 10 ವರ್ಷಕ್ಕೂ ಅಧಿಕ ಕಾಲ ಸೇವೆಯಲ್ಲಿರುವವರಿಗೆ ಶೇ.15 ರಷ್ಟು ಸಂಭಾವನೆ ಹೆಚ್ಚಳ ಮಾಡಲಾಗಿದೆ.

ನೌಕರರಿಗೆ ಮಾತು ನೀಡಿದ್ದಂತೆಯೇ ಕ್ರಮ ವಹಿಸಲಾಗಿದೆ. ಈ ಮೂಲಕ ನಮ್ಮ ಸರ್ಕಾರ ನೌಕರರ ಕ್ಷೇಮದ ಬದುಕಿಗೆ ಸದಾ ಶ್ರಮಿಸುತ್ತದೆ ಎಂದು ಸಚಿವರಾದ ಡಾ.ಕೆ. ಸುಧಾಕರ್ ಹೇಳಿದ್ದಾರೆ.

# ಕಪಿಲ್ ಸಿಬಾಲ್‌ರಿಂದ 'ಇನ್ಸಾಫ್' ವೇದಿಕೆ



ನವದೆಹಲಿ, ಮಾ. 4 – ದೇಶದಲ್ಲಿ ಅನ್ಯಾಯದ ವಿರುದ್ಧ ಹೋರಾಡಲು 'ಇನ್ಸಾಫ್' ಎಂಬ ವೇದಿಕೆ ಸ್ಥಾಪಿಸುವುದಾಗಿ ರಾಜ್ಯಸಭಾ ಸದಸ್ಯ ಕಪಿಲ್ ಸಿಬಾಲ್ ಘೋಷಿಸಿದ್ದಾರೆ.

ಮಾರ್ಚ್ 11ರಂದು ಸಭೆ ನಡೆಸಿ ಭಾರತದ ಹೊಸ ದೃಷ್ಟಿಕೋನ ಮುಂದಿಡಲಾಗುವುದು. ಇದಕ್ಕೆ ಪ್ರತಿಪಕ್ಷಗಳ ಆಡಳಿತದ ಮುಖ್ಯಮಂತ್ರಿಗಳು ಹಾಗೂ ನಾಯಕರು ಬೆಂಬಲಿಸಬೇಕು ಎಂದವರು ಕರೆ ನೀಡಿದ್ದಾರೆ. ದೇಶದ ಪ್ರತಿ ಮೂಲೆ ಮೂಲೆಯಲ್ಲಿ ಅನ್ಯಾಯ ನಡೆಯುತ್ತಿದೆ. ನಾಗರಿಕರು, ಸಂಸ್ಥೆಗಳು, ಪ್ರತಿಪಕ್ಷಗಳು, ಪತ್ರಕರ್ತರು, ಶಿಕ್ಷಕರು ಹಾಗೂ ಸಣ್ಣ ಉದ್ಯಮಿಗಳಿಗೆ ಅನ್ಯಾಯವಾಗುತ್ತಿದೆ ಎಂದವರು ಹೇಳಿದ್ದಾರೆ.

# ಮಹಾರಾಷ್ಟ್ರದಲ್ಲಿ ಬಂಬೂ ಅಪಘಾತ ತಡೆ : ಗಡ್ಕರಿ

ನಾಗಪುರ, ಮಾ. 4 – ಮಹಾರಾಷ್ಟ್ರದ ಚಂದ್ರಪುರ ಹಾಗೂ ಯಾವತ್ಮಲ್ ಜಿಲ್ಲೆಯ ಹೆದ್ದಾರಿಯಲ್ಲಿ 200 ಮೀಟರ್ ಉದ್ದದ ಬಂಬೂ ಅಪಘಾತ ತಡೆಯನ್ನು ಅಳವಡಿಸಲಾಗಿದೆ. ಈ ರೀತಿಯ ಕ್ರಮ ವಿಶ್ವದಲ್ಲೇ ಮೊದಲು ಎಂದು ಕೇಂದ್ರ ಸಚಿವ ನಿತಿನ್ ಗಡ್ಕರಿ ಹೇಳಿದ್ದಾರೆ.

ಇದು ದೇಶದಲ್ಲಿ ಸ್ಮರಣೀಯ ಸಾಧನೆ. ಇದರಿಂದ ಬಂಬೂ ವಲಯಕ್ಕೆ ಉತ್ತೇಜನ ಸಿಗಲಿದೆ. ಇದು ಉಕ್ಕಿನ ತಡೆಗೆ ಸೂಕ್ತ ಪರ್ಯಾಯ ಹಾಗೂ ಪರಿಸರ ರಕ್ಷಣೆಗೆ ನೆರವು ಸಿಗುತ್ತದೆ ಎಂದು ಗಡ್ಕರಿ ತಿಳಿಸಿದ್ದಾರೆ.

ಸರ್ಕಾರಿ ಸಂಸ್ಥೆಗಳು ಬಂಬೂ ತಡೆಯ ಬಗ್ಗೆ ಸುದೀರ್ಘ ಪರೀಕ್ಷೆ ನಡೆಸಿವೆ. ಅಗ್ನಿ ಪರೀಕ್ಷೆಯಲ್ಲಿ ಇದಕ್ಕೆ ಮೊದಲನೆಯ ದರ್ಜೆ ಶ್ರೇಯಾಂಕ ಸಿಕ್ಕಿದೆ ಎಂದವರು ಹೇಳಿದ್ದಾರೆ.

ಬಂಬೂ ತಡೆಗಳ ಮರು ಬಳಕೆಯ ಪ್ರಮಾಣ ಶೇ. 50-70ರಷ್ಟಿದೆ. ಉಕ್ಕಿನ ತಡೆಗಳ ಮರು ಬಳಕೆ ಮೌಲ್ಯ ಶೇ. 30-50ರಷ್ಟಿದೆ ಎಂದವರು ತಿಳಿಸಿದ್ದಾರೆ.

ಈ ತಡೆಗಳಿಗಾಗಿ ಬಂಬುಸಾ ಬಲ್ಕೊವಾ ಎಂಬ ಜಾತಿಯ ಗಳವನ್ನು ಬಳಸಲಾಗಿದೆ. ಇದನ್ನು ಕ್ರಿಯೊಸೊಟೆ ಆಯಿಲ್ ಹಾಗೂ ಹೈ ಡೆನ್ಸಿಟಿ ಪಾಲಿ ಎಥಿಲೀನ್ ಬಳಸಲಾಗಿದೆ. ಇದು ಬಂಬೂ ವಲಯದಲ್ಲಿ ಗಮನಾರ್ಹ ಸಾಧನೆ ಎಂದು ಗಡ್ಕರಿ ತಿಳಿಸಿದ್ದಾರೆ.

## ಎಸ್.ಬಿ.ನಾಗರಾಜ್‌ಗೆ ವಾಯುವಿಹಾರ ಬಳಗದಿಂದ ಅಭಿನಂದನೆ



ಎ.ಆರ್.ಜಿ.ಕಲಾ ಮತ್ತು ವಾಣಿಜ್ಯ ಕಾಲೇಜು ಹಳೆಯ ವಿದ್ಯಾರ್ಥಿಗಳ ಸಂಘ (ರಿ) ಅಧ್ಯಕ್ಷರಾಗಿ ಮರು ಆಯ್ಕೆಯಾಗಿರುವ ಎಸ್.ಬಿ.ನಾಗರಾಜ್ ಅವರನ್ನು ಎಸ್.ಬಸಪ್ಪನವರ ವಾಯುವಿಹಾರ ಬಳಗದಿಂದ ದಿ: 4-3-2023ರ ಶನಿವಾರ ಸಂಜೆ ಅಭಿನಂದಿಸಲಾಯಿತು.

Bapuji Educational Association (R.), DVG
B.E.A HIGHER PRIMARY CBSE SCHOOL
SRI S.NIJALINGAPPA LAY OUT, DAVANAGERE-4
ADMISSION OPEN FOR 2023-2024
L.K.G & U.K.G & few seats up to 10th std.,
Dr Shamanur Shivashankarappa, Hon. Secretary, Bapuji Educational Assn. Dvg
Sri S.S Mallikarjuna, Joint Secretary, Bapuji Educational Assn. Dvg
Smt Kirwadi Girijamma, Chairman, Governing Body. BEAHPS. DVG
Sri Sathish H S, Principal, BEAHPS. DVG
For more details contact:
Principal 9731064777

REQUIRED
Office Assistant, Labour, Driver, Accountant, Sales Executive & Autocad expert for a Tiles show room & Architect office in Davanagere. Interested Male/ Female candidates can apply with biodata & Photo to.
CERAMIC STUDIO
Above Global Honda car showroom, Besides Vani Honda showroom, P.B Road, Davanagere-4.
Ph.No.+91 94811 29235
Email: kapsonss@yahoo.co.in

WANTED Banking Process BPO
RSD Management Services
Hiring Tele Caller for Bajaj Finance
Job Type : Tele Caller, Education : PUC or Any Degree, Working Time : 9.30 am to 6.30 pm
Salary : Start from 8000 + Incenteves
Language : Kannada, Tamil & telugu
Contact : 95915 48661, 96329 72699
G.K. Complex, Ist Floor, Shamanur Road, Opp : Bosnoor Printers, Davangere - 577 004

**ನಗರಸಭಾ ಕಾರ್ಯಾಲಯ, ಹರಿಹರ–577601.**

ಫೋ:08192–244266 ಫ್ಯಾಕ್ಸ್:08192–241024
Website:www.hariharcity.mrc.gov.in.
E-mail ID no:itstaff_ulb_harihara@yahoo.com

ನಂ.ನಸಹ/ತಾಂತ್ರಿಕ/ಚುನಾವಣೆ/ಸಿಆರ್– 02/ 2022–23 ದಿ: 01.03.2023

**ಅಲ್ಪಾವಧಿ ಟೆಂಡರ್ ಪ್ರಕಟಣೆ**

2022–23ನೇ ಸಾಲಿನ ನಗರಸಭೆ ಸಾಮಾನ್ಯ ನಿಧಿ ಅನುದಾನದ ಕಾಮಗಾರಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದೇಶ–1999–2000ರ Act 2000ರ ನಿಯಮದಂತೆ ಸಾ ್ಯಂಡರ್ಡ್ ಬಿಡ್ ಡಾಕ್ಯುಮೆಂಟ್ ಕೆಡಬ್ಲ್ಯೂ–1ರ ನಿಯಮದನ್ವಯ ಈ ಕೆಳಗಿನ ಕಾಮಗಾರಿಗಳ ಇಂಡೆಂಟ್ ನಂಬರ್‌ಗಳ ಕಾಮಗಾರಿಗಳನ್ನು ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಸಿವಿಲ್ ಅರ್ಹ ಗುತ್ತಿಗೆದಾರರಿಂದ ಇ–ಪ್ರಕ್ಯೂರ್‌ಮೆಂಟ್ ಪೋರ್ಟ್‌ಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದ್ದು ಇಚ್ಛೆಯುಳ್ಳ ಗುತ್ತಿಗೆದಾರರು ಈ ಕೆಳಗಿನ ಕಾಮಗಾರಿಗಳಿಗೆ ತಮ್ಮ ದರಗಳನ್ನು e-procurement ಮುಖಾಂತರ ಸಲ್ಲಿಸಲು ಕೋರಿದೆ. ಗುತ್ತಿಗೆದಾರರು ತಮಗೆ ಬೇಕಾದ ಟೆಂಡರ್ ದಾಖಲೆಗಳನ್ನು https://eproc.karnataka.gov.in ವೆಬ್‌ಸೈಟ್ ಮೂಲಕ ಪಡೆದುಕೊಂಡು ಭರ್ತಿ ಮಾಡಿದ ಟೆಂಡರ್‌ಗಳನ್ನು e-procurement ವೆಬ್‌ಸೈಟ್ ಮೂಲಕ ಸಲ್ಲಿಸಬಹುದು ಹಾಗೂ ಹೆಚ್ಚಿನ ಮಾಹಿತಿಯನ್ನು ತಾಂತ್ರಿಕ ಶಾಖೆ ನಗರಸಭೆ, ಹರಿಹರ ಇವರಿಂದ ಪಡೆಯಬಹುದಾಗಿದೆ. .

(1) ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಮುಖಾಂತರ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 08–03–2023 ರಂದು ಸಾಯಂಕಾಲ 05–00 ಗಂಟೆಯವರೆಗೆ


**Indent no: DMA/2022-23/OW/WORK INDENT148073**

ವಾಸಾಇ/ಡಿವಿಜಿ/995/ ಕೆಎಸ್‌ಎಂಸಿಎ/2022–23

ಸಹಿ/–ಪೌರಾಯುಕ್ತರು, ನಗರಸಭೆ, ಹರಿಹರ.

## ಪದವಾಣಿ-55

ರಚನೆ : ಮಮತಾ ರಾಧಾಕೃಷ್ಣ ದಾವಣಗೆರೆ.



**ಎಡದಿಂದ ಬಲಕ್ಕೆ :**
- 1)ಕೆಂಪು ಕಣ್ಣು ಎಂಬರ್ಥದ ಸಂವತ್ಸರ 3
- 2) ಕೇರಳದ ಪ್ರಸಿದ್ಧ ಬೀಚ್ 3
- 4) ನಿರಂತರ 3
- 6) ಮಂಗನ ಕೈಯಲ್ಲಿರುವ ಅಮೂಲ್ಯ ರತ್ನ 3
- 7) ಒಂದು ಪ್ರದೇಶದ ಮಹಿಮೆಯನ್ನು ಸಾರುವ ಕತೆ 5
- 8) ಮರುತನ ಪುತ್ರನಾಗಿ ಹನುಮಂತ 3
- 10) ಮೀನಾಕ್ಷಿ ಅಮ್ಮನ ಸನ್ನಿಧಿ 3
- 12) ದಿಗಂತ-ಸಮಾನಾರ್ಥಕ ಪದ 3
- 13) ಕಡುಬಿನಲ್ಲಿರುವ ಸಿಹಿ ಮಿಶ್ರಣ 3

**ಮೇಲಿನಿಂದ ಕೆಳಕ್ಕೆ :**
- 1) ರಜಕನ ಬಳಿ ಇರುವ ಬೆಳ್ಳಿ 3
- 3) ಲಂಕೆಯನ್ನು ಕಾಯುವ ರಕ್ಕಸಿ 3
- 5) ಯಾವ ಪಕ್ಷವನ್ನೂ ಬೆಂಬಲಿಸದ ತಂತ್ರ 5
- 6) ಹೋಮವಲ್ಲ, ಅಳಿವು 5
- 9) ಶಿವನ ಕಣ್ಣಿನಂತಿರುವ ಕಾಯಿ 3
- 11) ಮುಖಂಡ ಹೀಗೆ ಬಂದಿದ್ದಾನೆ 3

(ಉತ್ತರಗಳು ಮುಂದಿನ ವಾರಕ್ಕೆ)

**ಪದವಾಣಿ - 54ರ ಉತ್ತರಗಳು :**

**ಎಡದಿಂದ ಬಲಕ್ಕೆ :** 1) ಸೂರ್ಯಕಾಂತಿ 3) ಮದಕರಿ 5) ರುಮಾಲು 6) ಕರ 8) ರಿಪು 9) ವಿಪ್ರ 10) ಲಸಾ (ಸಾಲ) 11) ಮೂಕಿ 12) ಲಡ್ಡು 13) ರಣ 14) ಮೈದಾ 15) ಹಣ 18) ರವಿ 20) ವಾರಾಶಿ 21) ಮತದಾರ 22) ಕಸರತ್ತು.

**ಮೇಲಿನಿಂದ ಕೆಳಕ್ಕೆ :** 1) ಸೂತಕ 2) ತಿರುಕ 3) ಮಲುಗು 4) ರಿಕಾಪು 7) ರವಿಕಿರಣ 8) ರಿಸಾಲದಾರ 15) ಹಜಾಮ 16) ಸವಾರ 17) ಕೌಶಿಕ 19) ವಿಪತ್ತು.

# ಭಾರೀ ರಿಯಾಯಿತಿ ಮಾರಾಟ ಮೇಳ ಇಂದು ಕೊನೆ



ದಾವಣಗೆರೆ, ಮಾ.4- ಎಸ್.ಎಸ್.ಮಾಲ್ ಪಕ್ಕ ಸದರನ್ ಸ್ಟಾರ್‌ನಲ್ಲಿ ವಿವಿಧ ಉಡುಪಗಳ ಮಾರಾಟ ಮೇಳವನ್ನು ಆಯೋಜಿಸಲಾಗಿತ್ತು. ಇದಕ್ಕೆ ಗ್ರಾಹಕರ ಉತ್ತಮ ಪ್ರತಿಕ್ರಿಯೆ ಬಂದಿದ್ದು, ಈಗ ಹೊಸ ಸ್ಟಾಕ್ ಬಂದಿರುತ್ತದೆ ಹಾಗೂ ಈ ಮೇಳವನ್ನು ನಾಳೆ ಭಾನುವಾರ ಕೊನೆಗೊಳಿಸಲಾಗುತ್ತದೆ.

ಬ್ರಾಂಡೆಡ್ ಕಂಪನಿಗಳ ಉಡುಪುಗಳು ಮಕ್ಕಳು, ಯುವಕರು, ಪುರುಷರು, ಯುವತಿಯರು, ಮಹಿಳೆಯರು, ವಯೋವೃದ್ಧರು ಹೀಗೆ ಎಲ್ಲ ವರ್ಗದವರಿಗೂ ಲಭ್ಯವಿದ್ದು, ಶೇ. 80 ರವರೆಗೂ ಭಾರೀ ರಿಯಾಯಿತಿಯನ್ನು ನೀಡಲಾಗಿದೆ. ಬಿಗ್ ಬ್ರಾಂಡ್ ಪುರುಷರ ರೆಡಿಮೆಡ್ ಗಾರ್ಮೆಂಟ್ಸ್ 1499 ರಿಂದ 4999ರ ಬೆಲೆಯ ಜೆಂಟ್ಸ್ ಪ್ಯಾಂಟ್, ನೆಟೆಡ್ ಕಾಟನ್ ಸ್ಟ್ರೆಚ್, ಮಸ್ಕರೈಸ್ ಕಾಟನ್ ಸ್ಟ್ರೆಚ್, ಸಾಟಿನ್, ಸಿಲ್ಕಿ, ಡಾಬಿ ಕಾಟನ್ ಸ್ಟ್ರೆಚ್, ಕಂಪರ್ಟ್ ಫಿಟ್, ನ್ಯಾರೋ, ಪೆನ್ಸಿಲ್, ರಿಲ್ಯಾಕ್ಸಡ್, ಕ್ಯಾಷ್ಯುಯಲ್ ಫಿಟ್ ಪ್ಯಾಂಟ್, ಶರ್ಟ್, ಟೀ ಶರ್ಟ್, ಲೋವೆರ್ ಮುಂತಾದವುಗಳನ್ನು ಕೇವಲ 499 ರಿಂದ 999ರ ಬೆಲೆಯಲ್ಲಿ ಲಭ್ಯವಿವೆ.

# ಕೊಡದಗುಡ್ಡದಲ್ಲಿ 8 ರಂದು ಶ್ರೀ ವೀರಭದ್ರೇಶ್ವರ ತೇರು



ಜಗಳೂರು ತಾಲ್ಲೂಕಿನ ಕೊಡದಗುಡ್ಡದಲ್ಲಿ ಇದೇ ದಿನಾಂಕ 8 ರ ಬುಧವಾರ ಸಂಜೆ 4.30 ಕ್ಕೆ ಶ್ರೀ ವೀರಭದ್ರೇಶ್ವರ ರಥೋತ್ಸವ ನಡೆಯಲಿದೆ.

ಇಂದು ಮಹಾಗಣಾರಾಧನೆ, ನಾಳೆ ಸೋಮವಾರ ಗಜವಾಹನೋತ್ಸವ, ದಿ. 7 ರ ಮಂಗಳವಾರ ವೃಷಭ ವಾಹನೋತ್ಸವ, ದಿ. 8ರ ಬುಧವಾರ ಬೆಳಿಗ್ಗೆ 6 ಗಂಟೆಗೆ ಅಗ್ನಿಕುಂಡ ಮಹೋತ್ಸವ ಹಾಗೂ ಅದೇ ದಿನ ಸಾಯಂಕಾಲ 4.30 ಕ್ಕೆ ಮಹಾರಥೋತ್ಸವ ನಡೆಯುವುದು.

ದಿನಾಂಕ 10 ರ ಶುಕ್ರವಾರ ಬೆಳಿಗ್ಗೆ 6 ಗಂಟೆಗೆ ಓಕಳಿ ನಡೆಯುವುದು. ದಿನಾಂಕ 9 ಮತ್ತು 10 ರಂದು ಜಾತ್ರೆ ನಡೆಯುವುದು. ದಿನಾಂಕ 11 ರಿಂದ 20 ರವರೆಗೆ ಎತ್ತಿನ ಜಾತ್ರೆ ನಡೆಯಲಿದೆ.

# ನಗರದಲ್ಲಿ ಇಂದು ಗುಳ್ಳಮ್ಮದೇವಿ ದೇವಸ್ಥಾನದ ವಾರ್ಷಿಕೋತ್ಸವ

ಪಿ.ಬಿ. ರಸ್ತೆಯ ಪಿಸಾಳೆ ಕಾಂಪೌಂಡ್ 3ನೇ ಕ್ರಾಸ್‌ನಲ್ಲಿರುವ ಶ್ರೀ ಗುಳ್ಳಮ್ಮದೇವಿ ದೇವಸ್ಥಾನದ 5ನೇ ವರ್ಷದ ವಾರ್ಷಿಕೋತ್ಸವವು ಇಂದು ನಡೆಯಲಿದೆ ಎಂದು ಶ್ರೀ ಶ್ರೀನಿವಾಸ ಸೇವಾ ಸಂಘ ತಿಳಿಸಿದೆ.

ಕಾರ್ಯಕ್ರಮದ ಅಂಗವಾಗಿ ಪ್ರಾತಃಕಾಲ 5 ರಿಂದ ಮಧ್ಯಾಹ್ನ 12.30 ರವರೆಗೆ ಕಾರ್ಯಕ್ರಮಗಳು ನಡೆಯಲಿವೆ. ಬೆಳಿಗ್ಗೆ 5.10 ರಿಂದ ಧ್ವಜಾರೋಹಣ, 6.10 ಕ್ಕೆ ಗಣಪತಿ ಪೂಜೆ ನಂತರ ಪುಣ್ಯಾಹ, ನಂದಿ ಪೂಜೆ, ನವಗ್ರಹ ಪೂಜೆ, ದೇವಿ ಅಭಿಷೇಕ, ಗಣ ಹೋಮ, ನವಗ್ರಹ ಹೋಮ, ದೇವಿ ಹೋಮ ನಡೆಯುವುದು. ಮಧ್ಯಾಹ್ನ 12 ಕ್ಕೆ ಪೂರ್ಣಾಹುತಿ, ನೈವೇದ್ಯ, ಮಹಾಮಂಗಳಾರತಿ ನಡೆಯುವುದು. ಮಧ್ಯಾಹ್ನ 1 ಗಂಟೆಗೆ ಪ್ರಸಾದ ವಿತರಣೆ ನಡೆಯುವುದು.

# ಅಕ್ಕ-ಪಕ್ಕದ ರಾಜ್ಯಗಳಲ್ಲಿರುವ ಅಚ್ಚಗನ್ನಡ ಪ್ರದೇಶಗಳು ಕರುನಾಡಿಗೆ ಸೇರುವಂತಾಗಬೇಕು

ಚನ್ನಗಿರಿ, ಮಾ.4- ಹಳೆ ಶಿಲಾಯುಗದಷ್ಟು ಪುರಾತನವಾದ ಈ ನಮ್ಮ ಕನ್ನಡನಾಡು ಕವಿಗಳ, ದಾರ್ಶನಿಕರ, ಚಿಂತಕರ, ಮೇಧಾವಿಗಳ ಗೂಡು ಎಂದು ದಾವಣಗೆರೆ ಜಿಲ್ಲಾ 12ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷ ಯುಗಧರ್ಮ ರಾಮಣ್ಣ ಹೇಳಿದರು.

ಹರನಹಳ್ಳಿ-ಕೆಂಗಾಪುರದಲ್ಲಿ ಶನಿವಾರ ಆರಂಭವಾದ 2 ದಿನಗಳ ಜಿಲ್ಲಾ 12ನೇ ಕನ್ನಡ ಸಾಹಿತ್ಯ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಕನ್ನಡನಾಡು-ನುಡಿಯೇ ಚೈತನ್ಯದ ಜಲಪಾತವಾಗಿದ್ದು, ಸಾಹಸಿಗಳ ಪ್ರಸಿದ್ಧ ಸಾಧನೆಯಿಂದ ಮರೆಯಲಾಗದ ಮಹಾನ್ ಸಾಮ್ರಾಜ್ಯಗಳ ತಾಣದಿಂದಾಗಿ ಸಾಹಿತ್ಯ, ಸಂಸ್ಕೃತಿ, ಕಲೆಗಳ ಅಕ್ಷಯ ನಿಧಿಯಾದ ಕನ್ನಡ ನಾಡಿಗೆ ಅನನ್ಯವಾದ ಇತಿಹಾಸ-ಪರಂಪರೆ ಇರುವುದೇ ನಮಗೆ ಹೆಮ್ಮೆ ಎಂದರು.

ಈ ನಮ್ಮ ನಾಡಿಗೆ ಆಂಧ್ರಪ್ರದೇಶ ದಲ್ಲಿರುವ ಆದವಾನಿ, ಆಲೂರು, ರಾಯ ದುರ್ಗ, ಮಡಶಿಲಾ, ಕಲ್ಯಾಣ ದುರ್ಗ, ಹಿಂದೂಪುರ, ಮಹಾರಾಷ್ಟ್ರದಲ್ಲಿರುವ ಸೊಲ್ಲಾಪುರ, ಅಕ್ಕಲಕೋಟೆ, ಜತ್ತ, ನೆಲದುರ್ಗ, ಉದುರ್ಗ, ಮಂಗಳವೇಡೆ, ತಮಿಳುನಾಡಿನನಲ್ಲಿರುವ ನೀಲಗಿರಿ, ಗುಡಲೂರು, ಊಟಿ, ಕೊನೂರು, ಬೆರಂಗೂರು, ಹೊಸೂರು, ಕೃಷ್ಣಗಿರಿ, ಕೇರದಲ್ಲಿರುವ ಕಾಸರಗೋಡು, ವಯನಾಡು ಇವುಗಳು ನಮ್ಮ ಕನ್ನಡ ನಾಡಿಗೆ ಸೇರಿದಾಗ ಮಾತ್ರ ನಮ್ಮ ಕರ್ನಾಟಕವಾಗುವುದು. ಆದಷ್ಟು ಬೇಗ ಈ ಅಚ್ಚಗನ್ನಡ ಪ್ರದೇಶಗಳು ಕನ್ನಡ ನಾಡಿಗೆ ಸೇರುವಂತಾಗಲೆಂಬ ಹೆಬ್ಬಯಕೆ ಈ ಯುಗಧರ್ಮನದು ಎಂದು ರಾಮಣ್ಣ ಸರ್ಕಾರವನ್ನು ಒತ್ತಾಯಿಸಿದರು.



ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷ ಯುಗಧರ್ಮ ರಾಮಣ್ಣ ಒತ್ತಾಯ

ನನ್ನಂಥ ದಡ್ಡನು ಬರೆದ ಸಾಹಿತ್ಯಕ್ಕೆ ನಾಡಿನಾದ್ಯಾಂತ ಸಂಚರಿಸಿ ಮತನಾಡಿದ ಮಾತಿಗೆ ಮಹತ್ವ ಕೊಟ್ಟು ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಸರ್ವಾಧ್ಯಕ್ಷನನ್ನಾಗಿ ಮಾಡಿರುವುದಕ್ಕೆ ಕೋಟಿ, ಕೋಟಿ ನಮನಗಳನ್ನು ಅರ್ಪಿಸಿದ ರಾಮಣ್ಣ, ಈ ನಾಡು-ನುಡಿ, ವೈಶಿಷ್ಟ್ಯ, ಸಂಕಷ್ಟ-ಸಮಸ್ಯಗೆಳು, ಪರಿಹಾರೋಪಯಗಳನ್ನು ಈ ನನ್ನ ಪದ್ಯಗಳ ಮೂಲಕ ತಮ್ಮಗಳ ಹೃದಯಕ್ಕೆ ಸಮರ್ಪಿಸುತ್ತೇನೆಂದು ಕನ್ನಡ ನಾಡು-ನುಡಿ ಕುರಿತು ಲಾವಣಿ ಹಾಡೊಂದನ್ನು ಹಾಡಿ ಎಲ್ಲರ ಗಮನ ಸೆಳೆದರು.

ಮಧ್ಯಾಹ್ನದ ನಂತರ ಸಮ್ಮೇಳನದಲ್ಲಿ ಕೃಷಿ ಕ್ಷೇತ್ರದ ಪ್ರಸ್ತುತ ಸ್ಥಿತಿ-ಗತಿಗಳು ಕುರಿತಾದ ಗೋಷ್ಠಿ ಮತ್ತು 'ಜಿಲ್ಲೆಯ ಪ್ರವಾಸೋದ್ಯಮ' ಅಭಿವೃದ್ಧಿ ಕುರಿತು ವಿಶೇಷ ಉಪನ್ಯಾಸಗಳ ಜೊತೆಗೆ ಯುಗಧರ್ಮ ರಾಮಣ್ಣ ಅವರ ಬದುಕು ಬರಹ, ಕುರಿತು ವಿಶೇಷ ಉಪನ್ಯಾಸಗಳು ನಡೆದವು.

# ನಗರದಲ್ಲಿ ಇಂದು ನೃತ್ಯ ಸಮರ್ಪಣಾ-2023

ಶ್ರೀ ಶಾರದಾ ಸಂಗೀತ ಮತ್ತು ನೃತ್ಯ ಕಲಾ ಶಾಲೆ ವತಿಯಿಂದ ಈಶ್ವರಮ್ಮ ಟ್ರಸ್ಟ್ ಸಹಕಾರದಲ್ಲಿ ನೃತ್ಯ ಕ್ಷೇತ್ರದ ಮಹಾನ್ ಚೇತನ ದಿ॥ ರುಕ್ಮಿಣಿದೇವಿ ಅರುಂಡೇಲ್ ಸಂಸ್ಮರಣಾರ್ಥ ನೃತ್ಯ ಸಮರ್ಪಣಾ-2023 ಭರತನಾಟ್ಯ ಕಾರ್ಯಕ್ರಮವನ್ನು ಇಂದು ಸಂಜೆ 5.30ಕ್ಕೆ ಈಶ್ವರಮ್ಮ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆಯಲ್ಲಿ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಈಶ್ವರಮ್ಮ ಶಾಲಾ ಆಡಳಿತ ಮಂಡಳಿ ಅಧ್ಯಕ್ಷರಾದ ಕೆ.ಆರ್. ಸುಜಾತ ಕೃಷ್ಣ, ಈಶ್ವರಮ್ಮ ಟ್ರಸ್ಟ್ ಅಧ್ಯಕ್ಷರಾದ ಎ.ಆರ್. ಉಷಾ ರಂಗನಾಥ್, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಮಂಜುನಾಥ ಏಕಬೋಟೆ ಪಾಲ್ಗೊಳ್ಳಲಿದ್ದಾರೆ. ಬಿಐಇಟಿ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಡಾ. ಬಿ.ಟಿ. ಅಚ್ಯುತ್ ಮತ್ತು ನಳಿನಿ ಅಚ್ಯುತ್ ಅವರಿಗೆ ಗೌರವ ಸಮರ್ಪಿಸಲಾಗುವುದು.

ಭರತನಾಟ್ಯ ವಿದ್ವತ್ ಅಂತಿಮ ವಿಭಾಗದಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿ ವಿಶ್ವಂಬರ ಆರ್. ಭಾಗವತ ಹಾಗೂ ಜ್ಯೋತಿ, ಬಿ.ಆರ್. ಅಂಜಲಿ ಅವರಿಗೆ ಪ್ರತಿಭಾ ಪುರಸ್ಕಾರ ಮಾಡಲಾಗುವುದು. ನಂತರ ಶ್ರೀ ಶಾರದಾ ಸಂಗೀತ ಮತ್ತು ನೃತ್ಯ ಕಲಾ ಶಾಲೆಯ ವಿದ್ಯಾರ್ಥಿಗಳಿಂದ ನೃತ್ಯ ಕಾರ್ಯಕ್ರಮ ನಡೆಯಲಿದೆ.

# ನಗರದಲ್ಲಿಂದು ಗೋಲ್ಡ್ ಫೆಸ್ಟಿವಲ್

ಕರ್ನಾಟಕ ಗೋಲ್ಡ್ ಫೆಸ್ಟಿವಲ್ ಇದರ ಸಂಕ್ಷಿಪ್ತ ವಿವರಣೆಯನ್ನು ಕೊಡುವ ಸಲುವಾಗಿ ಲೀಲಾವತಿ ಕಲ್ಯಾಣ ಮಂಟಪ ಹೋಟೆಲ್ ಪಂಜುರ್ಲಿಯಲ್ಲಿ ಇಂದು ಏರ್ಪಡಿಸಲಾಗಿದೆ. ಕಾರ್ಯಕ್ರಮದ ಉಸ್ತುವಾರಿಯನ್ನು ದಾವಣಗೆರೆ ಜುವೆಲರ್ಸ್ ಅಸೋಸಿಯೇಷನ್ ವಹಿಸಿದೆ ಎಂದು ಜಿಲ್ಲಾಧ್ಯಕ್ಷ ಬದ್ರಿನಾಥ್ ಆರ್.ಡಿ, (9448047804), ನಿರ್ದೇಶಕ ಮಂಜುನಾಥ್ ಆರ್. ವೆರ್ಣೇಕರ್ (ಬೆತ್ನಾಳ್) (7829498124) ತಿಳಿಸಿದ್ದಾರೆ.

# ನಗರದಲ್ಲಿ ಇಂದು ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ

ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿಯನ್ನು ಇಂದು ಸಂಜೆ 4 ಕ್ಕೆ ಜಿಲ್ಲಾಡಳಿತ ಭವನದಲ್ಲಿ ಆಚರಿಸಲಾಗುವುದು.

# ಜಿಲ್ಲಾ ಸಾಹಿತ್ಯ ಸಮ್ಮೇಳನದಲ್ಲಿಂದು ಗೋಷ್ಠಿ, ಸಾಧಕರಿಗೆ ಸನ್ಮಾನ, ಸಮಾರೋಪ

ಚನ್ನಗಿರಿ ತಾಲ್ಲೂಕು ಹರನಹಳ್ಳಿ-ಕೆಂಗಾಪುರದ ಶ್ರೀ ರಾಮಲಿಂಗೇಶ್ವರ ಮಠದ ಆವರಣದಲ್ಲಿ ನಡೆಯುತ್ತಿರುವ ದಾವಣಗೆರೆ ಜಿಲ್ಲಾ 12 ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಇಂದು ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಬೆಳಿಗ್ಗೆ 9.30 ಕ್ಕೆ ನಾಡು, ನುಡಿ ಗೀತ ಗಾಯನ, ಬೆಳಿಗ್ಗೆ 10 ಕ್ಕೆ ಮೈಸೂರಿನ ಹಿರಿಯ ಸಾಹಿತಿ ಜಯಪ್ಪ ಹೊನ್ನಾಳಿ ಅಧ್ಯಕ್ಷತೆಯಲ್ಲಿ ಕವಿಗೋಷ್ಠಿ ನಡೆಯಲಿದ್ದು, ಜಗಳೂರು ಹಿರಿಯ ಸಾಹಿತಿ ಎನ್.ಟಿ. ಯರ್ರಿಸ್ವಾಮಿ ಆಶಯ ನುಡಿಯಾಡಲಿದ್ದಾರೆ.

ಬೆಳಿಗ್ಗೆ 11.30 ಕ್ಕೆ ವಿಶೇಷ ಉಪನ್ಯಾಸ (ಮಾಲಿಕೆ-4) ನಡೆಯಲಿದ್ದು, ಸ್ವಚ್ಛತೆ, ಆರೋಗ್ಯ ಮತ್ತು ಸೂಕ್ಷ್ಮ ಜೀವಿ ಗಳು ಕುರಿತು ದಾವಣಗೆರೆ ವಿವಿ ಸೂಕ್ಷ್ಮ ಜೀವಿಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಡಾ.ಎಸ್.ಶಿಶುಪಾಲ್ ಉಪನ್ಯಾಸ ನೀಡುವರು. ಕೆ.ಎಸ್. ಬಸವಂತಪ್ಪ, ಬಸವರಾಜ್ ಶಿವಗಂಗಾ, ಸವಿತಾ ಮಲ್ಲೇಶನಾಯ್ಕ ಭಾಗವಹಿಸಲಿದ್ದಾರೆ.



ಮಧ್ಯಾಹ್ನ 12 ಕ್ಕೆ ಸಾಹಿತ್ಯ ವೈವಿಧ್ಯತೆ ಕುರಿತು ಎರಡನೇ ಗೋಷ್ಠಿ ನಡೆಯಲಿದೆ. ಮೈಸೂರು ಸಾಹಿತಿ ಡಾ.ಅನಸೂಯ ಎಸ್. ಕೆಂಪನಹಳ್ಳಿ ಅಧ್ಯಕ್ಷತೆ ವಹಿಸುವರು. 'ಜನಸಾಮಾನ್ಯರಲ್ಲಿ ಸಾಹಿತ್ಯದ ಅಭಿರುಚಿ' ಕುರಿತು ಪತ್ರಕರ್ತ ಎನ್.ವಿ. ರಮೇಶ್, 'ಶರಣರು ಕಟ್ಟ ಬಯಸಿದ ಸ್ತ್ರೀ ಸಮಾಜ' ಕುರಿತು ಶರಣ ಸಾಹಿತ್ಯ ಚಿಂತಕ ಎಂ.ಯು. ಚನ್ನಬಸಪ್ಪ, 'ಜಾನಪದ ಸಾಹಿತ್ಯದಲ್ಲಿ ಮಾನವೀಯ ಮೌಲ್ಯಗಳು' ಕುರಿತು ಉಪನ್ಯಾಸಕಿ ಡಾ. ಅನಿತಾ ದೊಡ್ಡಗೌಡರ್ ವಿಷಯ ಮಂಡಿಸಲಿದ್ದಾರೆ.

ಮಧ್ಯಾಹ್ನ 2.30 ಕ್ಕೆ ಬಹಿರಂಗ ಅಧಿವೇಶನ ಕಸಾಪ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ ಅಧ್ಯಕ್ಷತೆಯಲ್ಲಿ ನಡೆಯಲಿದೆ. ಗೌರವ ಕೋಶಾಧ್ಯಕ್ಷ ಕೆ. ರಾಘವೇಂದ್ರ ನಾಯರಿ ನಿರ್ಣಯ ಮಂಡಿಸುವರು. ಪರಿಷತ್ ಪದಾಧಿಕಾರಿಗಳಾದ ಬಿ. ದಿಳ್ಳೆಪ್ಪ, ರೇವಣಸಿದ್ಧಪ್ಪ ಅಂಗಡಿ, ಸಿ.ಜಿ. ಜಗದೀಶ್ ಕೂಲಂಬಿ, ಜಿಗಳಿ ಪ್ರಕಾಶ್, ಇ.ಎಂ. ಮಂಜುನಾಥ, ಕೆ.ಎಸ್. ವೀರೇಶ್ ಪ್ರಸಾದ್ ಮತ್ತಿತರರು ಭಾಗವಹಿಸಲಿದ್ದಾರೆ.

ಮಧ್ಯಾಹ್ನ 3 ಗಂಟೆಗೆ ವಿಶೇಷ ಉಪನ್ಯಾಸ (ಮಾಲಿಕೆ- 5) ನಡೆಯಲಿದ್ದು, ಖ್ಯಾತ ವಾಗ್ಮಿ ಪ್ರೊ. ಎಂ. ಕೃಷ್ಣೇಗೌಡ 'ಕನ್ನಡ ನುಡಿಯ ಉಳುವಿಗೆ ಗ್ರಾಮೀಣ ಜನರ ಕೊಡುಗೆ' ಕುರಿತು ಮಾತನಾಡಲಿ ದ್ದಾರೆ. ಮಾಡಾಳ್ ಮಲ್ಲಿಕಾರ್ಜುನ್, ಕೆ.ಎಂ. ಸುರೇಶ್, ಜಿ.ಎಸ್. ಶ್ಯಾಮ್ ಮತ್ತಿತರರು ಭಾಗವಹಿಸಲಿದ್ದಾರೆ.

ಸಂಜೆ 4 ಗಂಟೆಗೆ ಸಾಧಕರಿಗೆ ಸನ್ಮಾನ ಕಾರ್ಯಕ್ರಮ ಏರ್ಪಡಿಸಲಾಗಿದೆ. ಜಾನಪದ ತಜ್ಞ ಡಾ.ಎಂ.ಜಿ. ಈಶ್ವರಪ್ಪ ಅಧ್ಯಕ್ಷತೆ ವಹಿಸುವರು. ಜಿ.ಪಂ. ಸಿಇಓ ಡಾ. ಎ. ಚನ್ನಪ್ಪ ಅಭಿನಂದನಾ ನುಡಿಗಳನ್ನಾಡಲಿದ್ದಾರೆ. ದಾವಣಗೆರೆ ವಿವಿ ಉಪ ಕುಲಪತಿ ಡಾ.ಬಿ.ಡಿ. ಕುಂಬಾರ ಸಾಧಕರನ್ನು ಸನ್ಮಾನಿಸುವರು. ಕಸಾಪ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ, ನಿಕಟಪೂರ್ವ ಸಂಚಾಲಕ ಕೆ. ಸಿರಾಜ್ ಅಹಮದ್ ಭಾಗವಹಿಸಲಿದ್ದಾರೆ.

ಸಂಜೆ 6.30 ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ. ಸಂಜೆ 5.30 ಕ್ಕೆ ಸಮಾರೋಪ ಸಮಾರಂಭ ನಡೆಯಲಿದೆ.

ಕಸಾಪ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ ಅಧ್ಯಕ್ಷತೆ ವಹಿಸುವರು. ರಾಜ್ಯ ಸಾಹಿತ್ಯ ಅಕಾಡೆಮಿ ನಿಕಟಪೂರ್ವ ಅಧ್ಯಕ್ಷ ಡಾ.ಬಿ.ವಿ. ವಸಂತಕುಮಾರ್ ಸಮಾರೋಪ ಭಾಷಣ ಮಾಡುವರು. ಜಾನಪದ ಕಲಾವಿದ, ಸರ್ವಾಧ್ಯಕ್ಷ ಯುಗಧರ್ಮ ರಾಮಣ್ಣ ಸಮ್ಮೇಳನಾಧ್ಯಕ್ಷರ ನುಡಿಗಳನ್ನಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಶಾಸಕರಾದ ಎಂ.ಪಿ. ರೇಣುಕಾಚಾರ್ಯ, ಎಸ್. ರಾಮಪ್ಪ, ಯುವ ಮುಖಂಡ ನಿಖಿಲ್ ಕೊಂಡಜ್ಜಿ ಮತ್ತಿತರರು ಭಾಗವಹಿಸಲಿದ್ದಾರೆ.

# ಇವನಾರವ..? ನಮ್ಮವ... ಇವ ನಮ್ಮವ...!





(1ನೇ ಪುಟದಿಂದ) ಹುದ್ದೆಗೇರಿದರು. ಆದರೆ ಅವರ ಮುಂದಿನ ಪಟ್ಟುಗಳು ಯಾವ ರೀತಿ ಇರುತ್ತವೆಂಬುದನ್ನು ಕಾದು ನೋಡಬೇಕಿದೆ.

**ನಡೆದದ್ದಿಷ್ಟು :** ಪಾಲಿಕೆಯ ಮೇಯರ್ ಹಾಗೂ ಉಪ ಮೇಯರ್ ಸ್ಥಾನಕ್ಕಾಗಿ ಚುನಾವಣೆ ನಿಗದಿಯಾಗಿತ್ತು. ಮೇಯರ್ ಸ್ಥಾನ ಎಸ್ಟಿ ಮೀಸಲಾಗಿತ್ತು. ಬಿಜೆಪಿಯಲ್ಲಿ ಎಸ್ಟಿ ಸದಸ್ಯರು ಯಾರೂ ಇಲ್ಲದ ಕಾರಣ, ಈ ಬಾರಿ ಮೇಯರ್ ಗದ್ದುಗೆ ನಮ್ಮದೇ ಎಂದು ಕಾಂಗ್ರೆಸ್ ಬೀಗಿತ್ತು.

ಆದರೆ ಕಳೆದ ಎರಡು ಬಾರಿ ಸದಸ್ಯರನ್ನು ಸೆಳೆದು ಕಾಂಗ್ರೆಸ್‌ಗೆ ಪೆಟ್ಟು ಕೊಟ್ಟಿದ್ದ ಬಿಜೆಪಿ ಈ ಬಾರಿಯೂ ಸುಮ್ಮನಿರಲಿಲ್ಲ. ಕಾಂಗ್ರೆಸ್ ಸದಸ್ಯ ವಿನಾಯಕ ಪೈಲ್ವಾನ್ ಅವರಿಗೆ ಗಾಳ ಬೀಸಿತು. ನಾವು ಬೆಂಬಲ ನೀಡುತ್ತೇವೆ ನೀವು ಮೇಯರ್ ಹುದ್ದೆ ಅಲಂಕರಿಸಿ ಎಂದು ಹೇಳಿತು. ಕಾಂಗ್ರೆಸ್ ಪಕ್ಷದಲ್ಲಿ ಮೇಯರ್ ಸ್ಥಾನದ ಪ್ರಬಲ ಆಕಾಂಕ್ಷಿ ಯಾಗಿ 35ನೇ ವಾರ್ಡ್‌ನ ಸವಿತಾ ಗಣೇಶ್ ಹುಲ್ಮನಿ ಅವರಿರುವುದನ್ನು ತಿಳಿದಿದ್ದ ವಿನಾಯಕ ಪೈಲ್ವಾನ್ ಬಿಜೆಪಿ ಕಡೆ ವಾಲಿಕೊಂಡರು.

ಶನಿವಾರ ನಾಮಪತ್ರ ಸಲ್ಲಿಕೆ ವೇಳೆ ಕಾಂಗ್ರೆಸ್ ಸದಸ್ಯರು ಮುಖದಲ್ಲಿ ಕಳೆ ಇರಲಿಲ್ಲ. ಕಾಂಗ್ರೆಸ್ ಗದ್ದುಗೆ ಏರಲು ವಿನಾಯಕನಿಂದ ವಿಘ್ನವಿದೆ ಎಂಬುದು ಇದಕ್ಕೆ ಕಾರಣವಾಗಿತ್ತು. ಆದಾಗ್ಯೂ ಸವಿತಾ ಹುಲ್ಮನಿ ಅವರು ಮೇಯರ್ ಗಾದಿಗೆ ನಾಮಪತ್ರ ಸಲ್ಲಿಸಿದರು. ಉಪ ಮೇಯರ್ ಸ್ಥಾನಕ್ಕೆ 21ನೇ ವಾರ್ಡ್‌ನ ಎಂ.ಕೆ ಶಿವಲೀಲಾ ಕೊಟ್ರಯ್ಯ ನಾಮಪತ್ರ ಸಲ್ಲಿಸಿದರು.

ಇತ್ತ ವಿನಾಯಕ ಪೈಲ್ವಾನ್ ಅವರು ಬಿಜೆಪಿ ಸದಸ್ಯರಾದ ಎಸ್.ಟಿ. ವೀರೇಶ್, ಸೋಗಿ ಶಾಂತಕುಮಾರ್, ಕೆ. ಪ್ರಸನ್ನಕುಮಾರ್, ಶಿವಪ್ರಕಾಶ್ ಆರ್.ಎಲ್. ಅವರ ಬೆಂಗಾವಲಿನಲ್ಲಿ ಆಗಮಿಸಿ ನಾಮಪತ್ರ ಸಲ್ಲಿಸಿ ಹೊರ ಬಂದರು. ಈ ವೇಳೆ ವಿಪಕ್ಷ ನಾಯಕ ಗಡಿಗುಡಾಳ್ ಮಂಜುನಾಥ್, ಸದಸ್ಯರಾದ ಎ.ನಾಗರಾಜ್, ಚಮನ್ ಸಾಬ್ ಅವರುಗಳು ಪಕ್ಷಕ್ಕೆ ದ್ರೋಹ ಮಾಡಬೇಡಿ. ನಮ್ಮೊಟ್ಟಿಗೆ ಬನ್ನಿ ಎಂದು ಕರೆದೊಯ್ಯಲು ಯತ್ನಿಸಿದರು. ಈ ವೇಳೆ ಬಿಜೆಪಿ ಹಾಗೂ ಕಾಂಗ್ರೆಸ್ ಸದಸ್ಯರ ನಡುವೆ ತಳ್ಳಾಟ-ನೂಕಾಟ ನಡೆಯಿತು. ಆದರೆ ಯಾವುದಕ್ಕೂ ಆಸ್ಪದರ ಕೊಡದೆ ವಿನಾಯಕ ಪೈಲ್ವಾನ್ ಅವರನ್ನು ಬಿಜೆಪಿ ಸದಸ್ಯರು ಕಾರು ಹತ್ತಿಸಿ ಕರೆದೊಯ್ದರು.

ಇದಿಷ್ಟೂ ಮಧ್ಯಾಹ್ನ 12ರಿಂದ 1 ಗಂಟೆವರೆಗೆ ನಡೆದ ಪ್ರಹಸನವಾದರೆ, ಮಧ್ಯಾಹ್ನ 2.30ರಿಂದ ಮತ್ತೊಂದು ಪ್ರಹಸನ ನಡೆಯಿತು. 3 ಗಂಟೆಗೆ ಚುನಾವಣಾ ಸಭೆ ಆರಂಭವಾಗುವುದಾಗಿ ಚುನಾವಣಾಧಿಕಾರಿಗಳು ಸೂಚಿಸಿದ್ದರು. 2.40ರ ವೇಳೆ ಸಂಸದ ಜಿ.ಎಂ. ಸಿದ್ದೇಶ್ವರ ಸಾರಥ್ಯದಲ್ಲಿ, ಶಾಸಕ ಎಸ್.ಎ. ರವೀಂದ್ರನಾಥ್, ವಿಧಾನ ಪರಿಷತ್ ಸದಸ್ಯರು, ಬಿಜೆಪಿ ಸದಸ್ಯರು ಆಗಮಿಸಿದರು. ಮತ್ತೊಂದೆಡೆ ಶಾಸಕ ಶಾಮನೂರು ಶಿವಶಂಕರಪ್ಪ ಅವರೊಂದಿಗೆ ಕಾಂಗ್ರೆಸ್ ಸದಸ್ಯರು ಆಗಮಿಸಿದರು.



ಮೇಯರ್ ಸ್ಥಾನಕ್ಕೆ ನಾಮಪತ್ರ ಸಲ್ಲಿಸಿದ್ದ ಸವಿತಾ ಹುಲ್ಮನಿ ಗಣೇಶ್ ತಮ್ಮ ನಾಮಪತ್ರ ಹಿಂಪಡೆದ ಕಾರಣ, ಏಕೈಕ ಸ್ಪರ್ಧಿ ವಿನಾಯಕ ಪೈಲ್ವಾನ್ ಅವರನ್ನು ಅವಿರೋಧ ಆಯ್ಕೆ ಎಂದು ಚುನಾವಣಾಧಿಕಾರಿಗಳು ಘೋಷಿಸಿದರು. ಉಪ ಮೇಯರ್ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಯಶೋಧ ಹೆಗ್ಗಪ್ಪ ಅವರು ಕಾಂಗ್ರೆಸ್‌ನ ಶಿವಲೀಲಾ ಅವರನ್ನು ಸೋಲಿಸಿದರು.

ಪಾಲಿಕೆಯ ನೂತನ ಮೇಯರ್ ಆಗಿ ವಿನಾಯಕ ಪೈಲ್ವಾನ್ ಹೊರ ಬರುತ್ತಿದ್ದಂತೆ ಕಾಂಗ್ರೆಸ್ ಹಾಗೂ ಬಿಜೆಪಿ ಪಕ್ಷದವರು ಗೆಲುವು ನಮ್ಮದೇ ಎಂದು ಘೋಷಣೆ ಕೂಗಿದರು. ಬಿಜೆಪಿ ಬೆಂಬಲಿತ ಅಭ್ಯರ್ಥಿಗೆ ಜಯವಾಗಲಿ ಎಂದು ಬಿಜೆಪಿ ಸದಸ್ಯರು ಕೂಗಿದರೆ. ಕಾಂಗ್ರೆಸ್ ಅಭ್ಯರ್ಥಿಗೆ ಜಯವಾಗಲಿ ಎಂದರು ಕಾಂಗ್ರೆಸ್ ಸದಸ್ಯರು.

ವಿಪಕ್ಷ ನಾಯಕರ ಕೊಠಡಿಗೆ ನೂತನ ಮೇಯರ್ ಅವರನ್ನು ಕರೆದೊಯ್ಯಲಾಯಿತು. ಈ ವೇಳೆ ಶಾಸಕ ಡಾ.ಶಾಮನೂರು ಶಿವಶಂಕರಪ್ಪ ಅವರ ಕಾಲಿಗೆ ನಮಸ್ಕರಿಸಿದ ನೂತನ ಮೇಯರ್ ವಿನಾಯಕ ಪೈಲ್ವಾನ್, ನನ್ನನ್ನು ಯಾರೂ ಹೈಜಾಕ್ ಮಾಡಿಲ್ಲ. ಶಾಮನೂರು ಶಿವಶಂಕರಪ್ಪ ಅವರ ಆಶೀರ್ವಾದದಿಂದ ನಾನು ಮೇಯರ್ ಆಗಿದ್ದೇನೆ ಎಂದು ಹೇಳಿದರು.

ವಿನಾಯಕ ಪೈಲ್ವಾನ್ ಅವರಿಗೆ ಅನುಮೋದನಕರು ಹಾಗೂ ಸೂಚಕರಾಗಿ ಸದಸ್ಯರಾದ ಉಮಾ ಪ್ರಕಾಶ್, ಜಯಮ್ಮ ಗೋಪಿನಾಯ್ಕ, ಸೌಮ್ಯ ನರೇಂದ್ರ, ಆರ್.ಎಲ್. ಶಿವಪ್ರಕಾಶ್ ಸಹಿ ಮಾಡಿದ್ದರು.

## ಬಿಜೆಪಿಯದ್ದೇ ಗೆಲುವು

**(1ನೇ ಪುಟದಿಂದ) ಆಯ್ಕೆಗೆ ತೀರ್ಮಾನಿಸಿದ್ದಾರೆ ಎಂದು ಹೇಳಿದರು. 'ದೇಶಕ್ಕೆ ಅಮಿತ್ ಷಾ ಚಾಣಕ್ಯ ಆದರೆ ದಾವಣಗೆರೆಗೆ ಸಿದ್ದೇಶ್ವರ ಚಾಣಕ್ಯ' ಎಂದು ಶಿವಶಂಕರಪ್ಪನವರೇ ನನಗೆ ಹೆಸರು ಕೊಟ್ಟಿದ್ದಾರೆ ಎಂದು ಸಿದ್ದೇಶ್ವರ ಹೇಳಿದರು.**

**'ನಾ ನಾಯಕಿ' ಎಂದು ಪ್ರಿಯಾಂಕ ಗಾಂಧಿ ಹೇಳಿದರು. ಆದರೆ ಇಲ್ಲಿ ಕಾಂಗ್ರೆಸ್‌ನವರು ಮಹಿಳಾ ಅಭ್ಯರ್ಥಿಯಿಂದ ನಾಮಪತ್ರ ಸಲ್ಲಿಸಿ, ಮತ್ತೆ ಹಿಂಪಡೆದಿದ್ದೇಕೆ? ಎಸ್ಟಿ ಅಭ್ಯರ್ಥಿ ವಿನಾಯಕ ಪೈಲ್ವಾನ್ ಅವರಿಗೆ ಸೂಚಕರಾಗಿಯೂ ಕಾಂಗ್ರೆಸ್ ಸಹಿ ಮಾಡಲಿಲ್ಲ. ಆದರೆ ನಾವು ಎಸ್ಟಿ ಪಂಗಡದೊಂದಿಗಿದ್ದೇವೆ.**

**- ತೇಜಸ್ವಿನಿ, ವಿಧಾನ ಪರಿಷತ್ ಸದಸ್ಯೆ**

## ಉಪ್ಪು ತಿಂದವರು ನೀರು ಕುಡಿಯಲೇ ಬೇಕು

ಉಪ್ಪು ತಿಂದವರು ನೀರು ಕುಡಿಯಬೇಕು. ಹಾಗೆಯೇ ತಪ್ಪು ಮಾಡಿದ್ದರೆ ಶಿಕ್ಷೆ ಆಗುತ್ತದೆ ಎಂದು ಸಂಸದ ಜಿ.ಎಂ. ಸಿದ್ದೇಶ್ವರ ಹೇಳಿದರು.

ಶಾಸಕ ಮಾಡಾಳು ವಿರೂಪಾಕ್ಷಪ್ಪ ಅವರ ಪುತ್ರ ಲಂಚ ಸ್ವೀಕರಿಸುವಾಗ ಲೋಕಾಯುಕ್ತರ ಬಲೆಗೆ ಬಿದ್ದ ಬಗ್ಗೆ ಪ್ರತಿಕ್ರಿಯಿಸಿದ ಅವರು, ಕಾಂಗ್ರೆಸ್‌ನವರು ಲೋಕಾಯುಕ್ತ ರದ್ದು ಮಾಡಿ ಎಸಿಬಿ ತಂದರು. ಯಾರೇ ತಪ್ಪು ಮಾಡಿದರೂ ಶಿಕ್ಷೆ ಆಗಬೇಕೆಂಬ ಉದ್ದೇಶದಿಂದ ಬಿಜೆಪಿ ಮತ್ತೆ ಲೋಕಾಯುಕ್ತಕ್ಕೆ ಚಾಲನೆ ನೀಡಿದೆ. ಈ ಹಿನ್ನೆಲೆಯಲ್ಲಿ ತಪ್ಪು ಮಾಡಿದವರಿಗೆ ಶಿಕ್ಷೆ ಆಗುತ್ತದೆ ಎಂದು ಹೇಳಿದರು.


# ನಗರಕ್ಕೆ ನಾಳೆ ರಣದೀಪ್ ಸಿಂಗ್ ಸುಜೇವಾಲಾ

ದಾವಣಗೆರೆ, ಮಾ. 4 - ಎಐಸಿಸಿ ಪ್ರಧಾನ ಕಾರ್ಯದರ್ಶಿಗಳು ಹಾಗೂ ಕರ್ನಾಟಕ ಉಸ್ತುವಾರಿ ರಣದೀಪ್ ಸಿಂಗ್ ಸುಜೇವಾಲಾ ಅವರು ನಾಡಿದ್ದು ದಿನಾಂಕ 6ರ ಸೋಮವಾರ ಮಧ್ಯಾಹ್ನ 2 ಕ್ಕೆ ಪಕ್ಷದ ಮುಖಂಡರು ಹಾಗೂ ಚುನಾವಣಾ ಆಕಾಂಕ್ಷಿಗಳ ಸಭೆಯನ್ನು ನಗರದ ಎಂಬಿಎ ಆಡಿಟೋರಿಯಂ ನಲ್ಲಿ ನಡೆಸಲಿದ್ದಾರೆ. ಅಧ್ಯಕ್ಷತೆಯನ್ನು ಜಿಲ್ಲಾಧ್ಯಕ್ಷ ಎಚ್.ಬಿ ಮಂಜಪ್ಪ ವಹಿಸಿಕೊಳ್ಳಲಿದ್ದಾರೆ. ಸಭೆಯಲ್ಲಿ ಶಾಸಕ ಶಾಮನೂರು ಶಿವಶಂಕ ರಪ್ಪ, ಮಾಜಿ ಸಚಿವ ಎಸ್.ಎಸ್ ಮಲ್ಲಿಕಾರ್ಜುನ್ ಉಪಸ್ಥಿತರಿರು ವರು ಎಂದು ಜಿಲ್ಲಾ ಪ್ರಧಾನ ಕಾರ್ಯದರ್ಶಿ ದಿನೇಶ್. ಕೆ ಶೆಟ್ಟಿ ತಿಳಿಸಿದ್ದಾರೆ.

# ಕೈದಾಳೆಯಲ್ಲಿ ಇಂದು

ದಾವಣಗೆರೆ ತಾಲ್ಲೂಕಿನ ಕೈದಾಳೆ ಗ್ರಾಮದ ಶ್ರೀ ಮಲ್ಲಿಕಾರ್ಜುನ ಸ್ವಾಮಿ ಹಿರಿಯ ಪ್ರಾಥಮಿಕ ಶಾಲಾ ವಾರ್ಷಿಕೋತ್ಸವ ಇಂದು ಶಾಲಾ ಆವರಣದಲ್ಲಿ ನಡೆಯಲಿದೆ ಎಂದು ಶಾಲಾ ಆಡಳಿತಾಧಿಕಾರಿ ಮೇಘನಾ ತಿಳಿಸಿದ್ದಾರೆ.


## ಕಾಣೆಯಾಗಿದ್ದಾರೆ



ಕರಿಯಪ್ಪ ತಂದೆ ಲೇ॥ ಹುಚ್ಚಪ್ಪ, 64 ವರ್ಷ, ಕುರುಬರ ಜನಾಂಗ, ಕೂಲಿ ಕೆಲಸ, ವಿದ್ಯಾಭ್ಯಾಸ 4ನೇ ತರಗತಿ ವ್ಯಾಸಂಗ ಮಾಡಿರುತ್ತಾರೆ. ಭಾಷೆ-ಕನ್ನಡ, ಹಿಂದಿ, ಬಟ್ಟೆ-ಬಾದಾಮಿ ಬಣ್ಣದ ಶರ್ಟ್ ಹಾಗೂ ನೀಲಿ ಬಣ್ಣದ ಪ್ಯಾಂಟ್ ಧರಿಸಿರುತ್ತಾರೆ. ಸುಮಾರು 5.0 ಅಡಿ ಎತ್ತರ, ಕೋಲು ಮುಖ, ಗೋಧಿ ಮೈ ಬಣ್ಣ, ಬಲಗೈ ಸ್ವಾಧೀನ ಇರುವುದಿಲ್ಲ. ಈ ಮೇಲ್ಕಂಡ ಚಹರೆಯುಳ್ಳ ಕಾಣೆಯಾದ ಗಂಡಸಿನ ಬಗ್ಗೆ ಮಾಹಿತಿ ಸಿಕ್ಕಲ್ಲಿ ಕೂಡಲೇ ದಾವಣಗೆರೆ ಗಾಂಧಿನಗರ ಪೊಲೀಸ್ ಠಾಣೆಗೆ ಮಾಹಿತಿ ತಿಳಿಸಲು ಕೋರಿದೆ.

**ಮಂಜುನಾಥ್ ಕೆ.ಬಿ., : 9886372029**


# ಜಿಗಳಿಯಲ್ಲಿ ಇಂದು ಶ್ರೀ ರಂಗನಾಥ ಸ್ವಾಮಿ ರಥೋತ್ಸವ



ಮಲೇಬೆನ್ನೂರು ಸಮೀಪದ ಜಿಗಳಿ ಗ್ರಾಮದ ಆರಾಧ್ಯ ದೈವ ಶ್ರೀ ರಂಗನಾಥ ಸ್ವಾಮಿಯ ರಥೋತ್ಸವವು ಇಂದು ತಡರಾತ್ರಿ ಜರುಗಲಿದೆ.

ರಥೋತ್ಸವದ ಅಂಗವಾಗಿ ಇಂದು ಬೆಳಿಗ್ಗೆ 8 ಗಂಟೆಗೆ ಗಜ ಉತ್ಸವ, ಸಂಜೆ 4 ಗಂಟೆಯಿಂದ ಶಸ್ತ್ರ ಕಾರ್ಯಕ್ರಮಗಳು ನಡೆಯಲಿವೆ.

ಇದೇ ದಿನ ತಡರಾತ್ರಿ (ಸೋಮವಾರ ಬೆಳಗಿನ ಜಾವ) ಶ್ರೀ ರಂಗನಾಥ ಸ್ವಾಮಿಯ ರಥೋತ್ಸವವು ಶ್ರೀ ಬೀರಲಿಂಗೇಶ್ವರ ಸ್ವಾಮಿ, ಜಿ. ಬೇವಿನಹಳ್ಳಿಯ ಶ್ರೀ ಆಂಜನೇಯ ಸ್ವಾಮಿ, ಯಲವಟ್ಟಿಯ ಶ್ರೀ ಆಂಜನೇಯ ಸ್ವಾಮಿ ಒಡಗೂಡಿ ಸಕಲ ಬಿರುದಾವಳಿಗಳಿಂದ ಬ್ರಾಹ್ಮೀ ಮುಹೂರ್ತದಲ್ಲಿ ಜರುಗುವುದು. ನಾಳೆ ಸೋಮವಾರ ಸೋಮವಾರ ಬೆಳಿಗ್ಗೆ 10.30 ರಿಂದ ಜವಳ, ಮುದ್ರೆ ಮತ್ತು ಸಂಜೆ ಓಕಳಿ ನಂತರ ಕಂಕಣ ವಿಸರ್ಜನೆ ಮಾಡಲಾಗುವುದು.


## ಅಡಿಕೆ ತೋಟದ ರೈತ ಬಾಂಧವರೇ,

ಅಡಿಕೆಗೆ ಬರುವ ರೋಗಗಳು ಕೊಳೆ ರೋಗ, ಸುಳಿ ಕೊಳೆ, ಎಲೆ ಚುಕ್ಕೆ, ಅಣಬೆ ರೋಗ ,ಹಳದಿ ಎಲೆ ರೋಗ, ಅಡಿಕೆಗೆ ಬರುವ ಕೀಟಗಳು: ಜೇಡ ನುಸಿ, ಸುಳಿತಿಗಣೆ, ಹೂ ಗೊಂಚಲು ತಿನ್ನುವ ಹುಳು, ಹಿಟ್ಟು ತಿಗಣೆ, ಗೊಣ್ಣೆ ಹುಳು ಈ ಮೇಲ್ಕಂಡ ರೋಗಗಳಿಗೆ ಮತ್ತು ಕೀಟಗಳಿಗೆ ವೈಜ್ಞಾನಿಕವಾಗಿ ಯಾವ ಔಷಧಿಯನ್ನು spray ಮಾಡಬೇಕು ಹಾಗೂ ಅಡಿಕೆ ಇಳುವರಿ ಹೆಚ್ಚಿಸಲು ಯಾವ ಪೋಷಕಾಂಶಗಳನ್ನು ಮತ್ತು ಗೊಬ್ಬರವನ್ನು ಹಾಕಬೇಕು ಎಂದು ಮಾಹಿತಿ ಕೊಡಲಾಗುವುದು. ಅಡಿಕೆ ತೋಟದಲ್ಲಿ ಬೆಳೆಯುವ ಕಳೆಗಳಿಗೆ ಸಾವಯವ ಕಳೆನಾಶಕ ಹಾಗೂ ಭತ್ತದ ಇಳುವರಿ ಯನ್ನು ಹೆಚ್ಚಿಸುವ ಸಾವಯವ ಪೋಷಕಾಂಶಗಳು ದೊರೆಯುತ್ತದೆ. ಅಡಿಕೆ ಗಿಡಗಳಿಗೆ ಸ್ಪ್ರೇ ಮಾಡುವವರು ಕೂಡ ನಮ್ಮಲ್ಲಿ ದೊರೆಯುತ್ತಾರೆ. ಸಂಪರ್ಕಿಸಿ

**98451 04109**

REVAN EDUCATIONAL ASSOCIATION (R)

**Davangere Higher Primary English Medium Residential School**

Tq-Harihar Mitlakatte - 577 002, Dist- Davangere.

**WANTED TEACHERS / JOB VACANCIES**

| Sl No. | Posts | Quantity | Qualification with experience |
|---|---|---|---|
| 02 | Kananda | 01 | B.A.., B.Ed./MA B.Ed., with 3 Yrs Experience |
| 03 | Maths | 02 | M.Sc., B.Ed.. (PCM), with 3 Yrs Experience |
| 04 | Social Science | 01 | MA., B.Ed. with 3 Yrs Experience |
| 05 | Hindi | 01 | B.A., B.Ed., /M.A., B.Ed., with 3 Yrs Experience |
| 06 | Computer | 02 | B.C.A./M.C.A. with 3 Yrs Experience |
| 07 | For LKG & UKG | 03 | NTC/D.Ed., With 3 Yrs Experience |
| 01 | H.M. | 01 | M.A/M.Sc., B.Ed. with five Yrs Experience |

Interested Candidates may send your resumes to school Email (davangere48@gmail.com) on /before 15th March, 2023.
For More Details Contact : **88847 51589, 99642 62790**

*Sd/-* **Head Master**

# ಜಿಲ್ಲೆಯಲ್ಲಿ ಸಿಂಥೆಟಿಕ್ ಅಥ್ಲೆಟಿಕ್ ಟ್ರ್ಯಾಕ್ ನಿರ್ಮಾಣಕ್ಕೆ 7 ಕೋಟಿ ರೂ. ಮಂಜೂರು



ದಾವಣಗೆರೆ,ಮಾ.4- ಖೇಲೋ ಇಂಡಿಯಾ ಯೋಜನೆ ಅಡಿಯಲ್ಲಿ ಜಿಲ್ಲೆಯಲ್ಲಿ ಸಿಂಥೆಟಿಕ್ ಅಥ್ಲೆಟಿಕ್ ಟ್ರ್ಯಾಕ್ ನಿರ್ಮಾಣ ಮಾಡುವಂತೆ ಸಂಸದ ಜಿ.ಎಂ. ಸಿದ್ದೇಶ್ವರ ಅವರು ಸಲ್ಲಿಸಿದ್ದ ಯೋಜನೆ ಪ್ರಸ್ತಾವವನ್ನು ಅಂಗೀಕರಿಸಿರುವ ಕೇಂದ್ರ ಸರ್ಕಾರದ ಕ್ರೀಡಾ ಇಲಾಖೆ ಅದಕ್ಕಾಗಿ 7 ಕೋಟಿ ರೂ.ಗಳನ್ನು ಮಂಜೂರು ಮಾಡಿದೆ.

ಈ ಸಂಬಂಧ ರಾಜ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಆಯುಕ್ತರಿಗೆ ಮಾಹಿತಿ ನೀಡಿರುವ ಕೇಂದ್ರ ಕ್ರೀಡಾ ನಿರ್ದೇಶಕ ಅರುಣ್ ಕುಮಾರ ಯಾದವ್, ಕೂಡಲೇ ಯೋಜನೆ ಕಾರ್ಯಗತಗೊಳಿಸಲು ಭೂಮಿ ಮತ್ತಿತರೆ ವಿಷಯಗಳ ಕುರಿತು ಮಾಹಿತಿ ನೀಡುವಂತೆ ಸೂಚಿಸಲಾಗಿದೆ. ಖೇಲೋ ಇಂಡಿಯಾ ಯೋಜನೆ ಮಾರ್ಗಸೂಚಿಯಂತೆ ವಿಧಿ-ವಿಧಾನಗಳು ಪೂರ್ಣವಾಗುತ್ತಲೇ ಹಣ ಬಿಡುಗಡೆ ಮಾಡುವುದಾಗಿ ಅವರು ತಿಳಿಸಿದ್ದಾರೆ.

# ನಗರದಲ್ಲಿ ಇಂದು ನವೀಕೃತ ಖಾಸಗಿ ಬಸ್ ನಿಲ್ದಾಣದ ಉದ್ಘಾಟನೆ

ಮಹಾನಗರಪಾಲಿಕೆ ಮಾಲೀಕತ್ವದ ಹಳೇ ಖಾಸಗಿ ಬಸ್ ನಿಲ್ದಾಣವನ್ನು ಸ್ಮಾರ್ಟ್ ಸಿಟಿ ಲಿಮಿಟೆಡ್ ವತಿಯಿಂದ ಪುನರ್ ನಿರ್ಮಿಸಲಾಗಿದ್ದು, ಈ ಬಸ್ ನಿಲ್ದಾಣದ ಉದ್ಘಾಟನಾ ಸಮಾರಂಭವು ಇಂದು ಬೆಳಿಗ್ಗೆ 10.30 ಕ್ಕೆ ನಡೆಯಲಿದೆ.

ನಗರಾಭಿವೃದ್ಧಿ ಸಚಿವರೂ ಆಗಿರುವ ಜಿಲ್ಲಾ ಉಸ್ತವಾರಿ ಸಚಿವ ಬಿ.ಎ. ಬಸವರಾಜ (ಭೈರತಿ) ಕಾರ್ಯಕ್ರಮ ಉದ್ಘಾಟಿಸುವರು. ಸಂಸದ ಜಿ.ಎಂ ಸಿದ್ದೇಶ್ವರ, ಹಿರಿಯ ಶಾಸಕರುಗಳಾದ ಶಾಮನೂರು ಶಿವಶಂಕರಪ್ಪ, ಎಸ್.ಎ ರವೀಂದ್ರನಾಥ್ ಹಾಗೂ ಇತರೆ ಗಣ್ಯರು ಉಪಸ್ಥಿತರಿವರು.

**ಖಾಸಗಿ ಬಸ್ ಮಾಲೀಕರ ಕರೆ :** ನವೀಕೃತ ಖಾಸಗಿ ಬಸ್ ನಿಲ್ದಾಣದ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸುವ ಸಂಬಂಧ ಖಾಸಗಿ ಬಸ್ ಮಾಲೀಕರು ಖಾಸಗಿ ಬಸ್ ಮಾಲೀಕರ ಸಂಘದ ಕಚೇರಿ ಬಳಿ ಇಂದು ಬೆಳಿಗ್ಗೆ 9.30ಕ್ಕೆ ಆಗಮಿಸುವಂತೆ ಖಾಸಗಿ ಬಸ್ ಮಾಲೀಕರ ಸಂಘದ ಅಧ್ಯಕ್ಷ ಕೆ.ಎಸ್. ಮಲ್ಲೇಶಪ್ಪ ಕೋರಿದ್ದಾರೆ.

# ಸಂಚಾರ ದಂಡ ಪಾವತಿಗೆ ಶೇ.50 ರಷ್ಟು ರಿಯಾಯಿತಿ ಅವಧಿ ವಿಸ್ತರಣೆ

ದಾವಣಗೆರೆ, ಮಾ.4- ವಾಹನ ಸವಾರರ ಸಂಚಾರಿ ದಂಡ ಪಾವತಿಸಲು ರಾಜ್ಯ ಸರ್ಕಾರ ಶೇ.50 ರಷ್ಟು ರಿಯಾಯಿತಿಯನ್ನು ಮಾರ್ಚ್ 4 ರಿಂದ ಅನ್ವಯವಾಗುವಂತೆ 15 ದಿನಗಳ ವರೆಗೆ ಅವಧಿ ವಿಸ್ತರಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಮೀಪದ ಪೊಲೀಸ್ ಠಾಣೆಯನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು ತಿಳಿಸಿದ್ದಾರೆ.


Sri Sharadhamba Education Trust

**SMARTKIDZ PATSHALA**

PLAY GROUP TO 5th STD, ENGLISH MEDIUM SCHOOL

**Teachers Required**

for the Academic Year 2023-24

INTERVIEW will be held on 11th & 12th March, 2023 between 9.00 am to 1.00 pm

Interest candidates can walk-in to the interview with a resume by preparing for a 20 mins. demo class of your Expert Subjects like English, Science, Hindi, Social, Computer, PE Teacher and also wanted teachers for Pre-School.

Note : also wanted Aaya & Drivers.

for more details call : 99862 11344

Venue : SMARTKIDZ ENGLISH MEDIUM SCHOOL, #785/1/6, Hitech Hospital Road, Kalidasa Circle, Jayanagar "B" Block, Nittuvalli, Davangere - 4. Whatsapp : 9986 211 344

Admission Opened for the Academic Year 2023-24




**SCIENCE ACADEMY (R.)**

(A UNIQUE CENTRE FOR P.U. CLASSES)
# 307 / 2B, I FLOOR, 2ND MAIN, P.J. EXTN
NEAR STADIUM, DAVANGERE – 4

**ADMISSION STARTED FOR**
II PUC (PCMB) SUMMER CLASSES
Classes starts from 9th March 2023 &
**CET–NEET CRASH COURSE**
Classes starts from 27th March 2023 &
SSLC (10th) CBSE/STATE SUMMER CLASSES
Classes starts from 3rd April 2023

- Subject Experts will engage the classes.
- Only Few Seats are Available, Join early.

For more Details contact:
Office: 08192 – 457761, Mobi.: 9980368779 9448178087
"We don't have any other branches in Davangere in the name of Academy".


## ನಗರಕ್ಕೆ ಇಂದು ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ

ಕೇಂದ್ರ ಸಂಸದೀಯ ವ್ಯವಹಾರ ಗಣಿ ಹಾಗೂ ಕಲ್ಲಿದ್ದಲು ಖಾತೆ ಸಚಿವ ಪ್ರಹ್ಲಾದ್ ಜೋಶಿ ಅವರು ಇಂದು ನಗರಕ್ಕೆ ಆಗಮಿಸಲಿದ್ದು, ಮಧ್ಯಾಹ್ನ12.15ಕ್ಕೆ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಯಲಿರುವ ಜಿಲ್ಲಾ ಮಟ್ಟದ ಫಲಾನುಭವಿಗಳ ಸಮ್ಮೇಳನದಲ್ಲಿ ಭಾಗವಹಿಸಲಿದ್ದಾರೆ.

## ದೊಡ್ಡಬಾತಿ ಜಾತ್ರೆ ಪ್ರಯುಕ್ತ ಸಂತೆ ರದ್ದು

ದೊಡ್ಡಬಾತಿ ಗ್ರಾಮದ ಶ್ರೀ ರೇವಣಸಿದ್ದೇಶ್ವರ ಸ್ವಾಮಿ ರಥೋತ್ಸವದ ಪ್ರಯುಕ್ತ ನಾಳೆ ಸೋಮವಾರ ನಡೆಯುವ ವಾರದ ಸಂತೆಯನ್ನು ರದ್ದು ಪಡಿಸಲಾಗಿದೆ ಎಂದು ಗ್ರಾಮ ಪಂಚಾಯಿತಿ ಪ್ರಕಟಣೆ ತಿಳಿಸಿದೆ.










JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte